# ಹಂಪಿ ಟೈಮ್ಸ್
# HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

ಸಂಪುಟ:01 • ಸಂಚಿಕೆ:264 • ನೋಂದಣಿ ನಂ.:KARKAN27911 • ವಿಜಯನಗರ • 16.03.2024 • ಶನಿವಾರ • ಪುಟ:04 • ಬೆಲೆ:2
Volume:01 • Issue:264 • Reg.No:KARKAN27911 • VIJAYANAGARA • 16.03.2024 • Saturday • Page:04 • Rs:2



Scan For Digital Colourful
Hampi Times E-paper



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com





Inauguration by
Sri M.S.DIVAKAR, I.A.S.
DC, Vijayanagara District



Chief Guest
Smt. JAYALAKSHMI PATIL
Theatre Actor, Writer



Preside
Dr.D V PARAMASHIVAMURTHY
Vice-Chancellor, Hampi Kannada University

SFX CHAP
Futur Audio Post Production Studio
an Exciting new chapter in the world of Music and Film Sound Designing.
VIVĒKASRĒYĀLĀPA
VEENA INSTRUMENTAL VOCAL - KARNATIC AND FILM MUSIC Classes
M:91082 26938, 90368 65666

Inaugural Function
FILM RECORDING STUDIO
Date: March 16, 2024 at 4:00 pm
Venue: Hospet Sports Complex, Hosapete





With Best Compliments from
Achala G S & Vihaan Abhyudaya & Family


## ಮೈಕ್ರೋ ನ್ಯೂಸ್

### ಆಜಾದ್ ಮಾದರಿ ಶಾಲೆ ಪ್ರವೇಶ ಆರಂಭ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಶೈಕ್ಷಣಿಕ ಸಾಲಿನಲ್ಲಿ ಕಮಲಾಪುರದ ಅಲ್ಪಸಂಖ್ಯಾತರ ಸರಕಾರಿ ಮೌಲಾನಾ ಅಜಾದ್ ಮಾದರಿ ಶಾಲೆಯಲ್ಲಿ 6 ರಿಂದ 9ನೇ ತರಗತಿಗಳ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ. ಈ ಶಾಲೆಗಳು ಆಂಗ್ಲ ಮಾಧ್ಯಮ ಶಾಲೆಗಳಾಗಿವೆ. 2022–23ರಲ್ಲಿ 100ರಷ್ಟು ಫಲಿತಾಂಶ ನೀಡಿದ್ದು ಉತ್ತಮ ಅನುಭವಿ ಶಿಕ್ಷಕರು ಸ್ಮಾರ್ಟ್ ಕ್ಲಾಸ್ ಮೂಲಕ ಬೋಧನೆ ಮಾಡುತ್ತಾರೆ. ಉಚಿತವಾಗಿ ಶಾಲಾ ಸಮವಸ್ತ್ರ, ಬ್ಯಾಗ್, ಪಠ್ಯಪುಸ್ತಕ ಮತ್ತು ಕಲಿಕಾ ಸಾಮಗ್ರಿ ನೀಡಲಾಗುತ್ತದೆ. ಶಾಲೆಯು ಉತ್ತಮ ಕಟ್ಟಡ, ಆಟೋಟ ಮೈದಾನ, ಕ್ರೀಡಾ ಸಾಮಗ್ರಿ ಹೊಂದಿರುತ್ತದೆ ಮತ್ತು ಕಲಿಕೆಗೆ ಪೂರಕವಾಗಿರುತ್ತದೆ. ಆಸಕ್ತರು ಕಮಲಾಪುರ ಅಥವಾ ಹೊಸಪೇಟೆ ಮೌಲಾನಾ ಆಜಾದ್ ಮಾದರಿ ಶಾಲೆಗೆ ಖುದ್ದಾಗಿ ಬಂದು ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ, 9353211090, 9611973740, 9482775439 ಸಂಪರ್ಕಿಸಬೇಕು ಎಂದು ಕಮಲಾಪುರದ ಮೌಲಾನಾ ಆಜಾದ್ ಮಾದರಿ ಶಾಲೆಯ ಮುಖ್ಯಾಧ್ಯಾಪಕ ಮಂಜುನಾಥ್ ಪಾಟೀಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಾ.16ರಂದು ವಿದ್ಯುತ್ ನಗರ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಜೆಸ್ಕಾಂ ನಗರದ ಉಪ ವಿಭಾಗ–1 ಮತ್ತು 2ರ ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಮಾರ್ಚ್ 16ರಂದು ಮಧ್ಯಾಹ್ನ 3.30 ರಿಂದ ಸಂಜೆ 5 ಗಂಟೆಯವರೆಗೆ ಹೊಸಪೇಟೆ ನಗರ ಉಪ ವಿಭಾಗ–2 ಕಚೇರಿಯಲ್ಲಿ ಏರ್ಪಡಿಸಲಾಗಿದೆ.

ಹೊಸಪೇಟೆ ತಾಲ್ಲೂಕಿನ ನಗರದ ವಿದ್ಯುತ್ ಗ್ರಾಹಕರು ಈ ಸಭೆಗೆ ಭಾಗವಹಿಸಿ ವಿದ್ಯುತ್ ಸಮಸ್ಯೆ ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ, ಪರಿಹರಿಸಿಕೊಳ್ಳಬಹುದು ಎಂದು ಜೆಸ್ಕಾಂ ಹೊಸಪೇಟೆಯ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**ಬೇಕಾಗಿದ್ದಾರೆ**

ಶಾನಭಾಗ ಟವರ್ಸ್‌ನಲ್ಲಿ ಹಾಜರಿ ಹೆಬ್ಬೆಟ್ಟು ಮಿಷನ್ ಹಾಕುವವರು ಬೇಕಾಗಿದ್ದಾರೆ.
ಮೂರರಿಂದ ನಾಲ್ಕು
Biometric Fingerprint
Time & Attendance Machine
ಮಷಿನ್ ಹಾಕಬೇಕಿದೆ. ಸರ್ವಿಸ್ ನೀಡಲಿಚ್ಛಿಸುವವರು ಸಂಪರ್ಕಿಸಿ.
**ಶಾನಭಾಗ ಟವರ್ಸ್ ನ್ಯಾಷನಲ್ (ಪ್ರೈ) ಲಿಮಿಟೆಡ್**
ಶಾನಭಾಗ ಸರ್ಕಲ್, ಹೊಸಪೇಟೆ–583201
9482147421
9449193615


# ತಾಯಿ ಮಕ್ಕಳ ಆಸ್ಪತ್ರೆಗೆ ಡಿಸಿ ಭೇಟಿ ಹೆಚ್ಚಿನ ಹೆರಿಗೆ, ಚಿಕಿತ್ಸೆಗೆ ಸೂಚನೆ

## ಆಸ್ಪತ್ರೆಯ ಒಳ, ಹೊರಗೂ ಪರಿಶೀಲನೆ | ಪ್ರತಿ ತಿಂಗಳು 500ಕ್ಕೂ ಅಧಿಕ ಹೆರಿಗೆ ಮಾಡಲು ಕ್ರಮವಹಿಸಿ ಎಂದ ಡಿ.ಸಿ. ದಿವಾಕರ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆಯ ನಗರಸಭೆಯ ಹಿಂಭಾಗದಲ್ಲಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಶುಕ್ರವಾರ ದಿಢೀರ್ ಭೇಟಿ ನೀಡಿದರು.

ಮೊದಲಿಗೆ ಆಸ್ಪತ್ರೆಯ ಸುತ್ತಲಿನ ಹೊರಾಂಗಣದಲ್ಲಿ ಸಂಚರಿಸಿ ಸಿಸಿ ರಸ್ತೆ ಕಾಮಗಾರಿಯ ಬಗ್ಗೆ ಪರಿಶೀಲಿಸಿದರು. ಬಳಿಕ ಆಸ್ಪತ್ರೆ ಪ್ರವೇಶಿಸಿ ಅಲ್ಲಿನ ನಾನಾ ವಾರ್ಡಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು. ಆಸ್ಪತ್ರೆಯಲ್ಲಿದ್ದ ರೋಗಿಗಳೊಂದಿಗೆ ಜಿಲ್ಲಾಧಿಕಾರಿಗಳು ಸಮಾಲೋಚನೆ ನಡೆಸಿ ಆಸ್ಪತ್ರೆಯಲ್ಲಿನ ಸೇವೆಗಳ ವಿನಿಮಯದ ಬಗ್ಗೆ ಪರೀಕ್ಷಿಸಿದರು.

ಇದೆ ವೇಳೆ ಜಿಲ್ಲಾಧಿಕಾರಿಗಳು ಮಕ್ಕಳ ರೋಗ ತಜ್ಞರು ಮತ್ತು ಸ್ತ್ರೀರೋಗ ತಜ್ಞರೊಂದಿಗೆ ಸಮಾಲೋಚಿಸಿದರು. ಭದ್ರತಾ ಸೇವೆ ಸೇರಿದಂತೆ ಆಸ್ಪತ್ರೆಗೆ ಅವಶ್ಯವಿರುವ ಸಿಬ್ಬಂದಿಯನ್ನು ಪಡೆದುಕೊಳ್ಳುವ ಪ್ರಕ್ರಿಯೆ ನಡೆಸುವುದಕ್ಕೆ ಸಂಬಂಧಿಸಿದಂತೆ ಸಭೆ ನಡೆಸಿ ಅನುಮೋದನೆ ಪಡೆದುಕೊಳ್ಳಲು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.





ಈ ಆಸ್ಪತ್ರೆಯನ್ನು 60 ಬೆಡ್‌ನಿಂದ 100 ಬೆಡ್‌ಗಳವರೆಗೆ ವಿಸ್ತರಣೆ ಮಾಡಲು ಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳು ಇಲ್ಲಿದ್ದು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಅನುಕೂಲವಾಗುವ ಹಾಗೆ ಪ್ರತಿ ತಿಂಗಳು 500 ಮೇಲ್ಪಟ್ಟು ಹೆರಿಗೆ ಮಾಡಲು ಕ್ರಮ ವಹಿಸಬೇಕು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ಆಸ್ಪತ್ರೆಯಲ್ಲಿನ ಸ್ತ್ರೀರೋಗ ತಜ್ಞರಿಗೆ ಆದೇಶ ಮಾಡಿದರು.

ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯಗಳಿವೆ. ಆದರೆ, ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿ ನೌಕರರ ಕೊರತೆಯಾಗಿದೆ. ಕೆಲವು ವಿಭಾಗಗಳಿಗೆ ಉಪಕರಣಗಳ ಕೊರತೆಯಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಶಂಕರ ನಾಯಕ ಅವರು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

ಆಸ್ಪತ್ರೆಯಲ್ಲಿ ಶುಚಿತ್ವಕ್ಕೆ ಹೆಚ್ಚಿನ ಒತ್ತು ಕೊಡಬೇಕು. ಆಸ್ಪತ್ರೆಯಲ್ಲಿನ ಮೂಲಭೂತ ಸೌಕರ್ಯ ಸದ್ಬಳಕೆಯಾಗಬೇಕು. ಈ ನಿಟ್ಟಿನಲ್ಲಿ ಆಸ್ಪತ್ರೆಗೆ ಅವಶ್ಯವಿರುವ ಸಿಬ್ಬಂದಿ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದು ಜನರಿಗೆ ಉತ್ತಮ ಸೇವೆ ನೀಡಲು ಕ್ರಮ ವಹಿಸಬೇಕು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಆದೇಶಿಸಿದರು.

ಮಕ್ಕಳ ರೋಗ ತಜ್ಞರೊಂದಿಗೆ ಜಿಲ್ಲಾಧಿಕಾರಿಗಳು ಇದೆ ವೇಳೆ ಸಮಾಲೋಚಿಸಿದರು. ಮಕ್ಕಳ ವಿಭಾಗಕ್ಕೆ ಅವಶ್ಯಕತೆ ಇದ್ದಲ್ಲಿ ವೈದ್ಯಕೀಯ ಉಪಕರಣಗಳ ಖರೀದಿಗೆ ಸಹ ಒತ್ತು ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಮಕ್ಕಳ ರೋಗ ತಜ್ಞರಿಗೆ ಸೂಚಿಸಿದರು.

ಆಸ್ಪತ್ರೆ ಸುತ್ತಲಿನ ಸಿಸಿ ರಸ್ತೆಯ ಗುಣಮಟ್ಟದ ಬಗ್ಗೆ ಸಹ ಪರಿಶೀಲಿಸಿ ವರದಿ ಮಾಡಬೇಕು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗೆ ಸೂಚನೆ ನೀಡಿದರು. ಈ ವೇಳೆ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಸಲೀಂ., ಅರವಳಿಕೆ ತಜ್ಞರಾದ ನೂರಭಾಷಾ ಇತರರಿದ್ದರು.

# ಆರೋಗ್ಯ ತಪಾಸಣೆಗೆ ನಿರ್ಲಕ್ಷ್ಯ ಬೇಡ

## ಸ್ತ್ರೀರೋಗ ತಜ್ಞವೈದ್ಯೆ ಡಾ. ಹೇಮಲತಾ ಹೇಳಿಕೆ | ಕ್ಯಾನ್ಸರ್ ಗುಣಪಡಿಸಲು ಲಸಿಕೆ ಲಭ್ಯ

## ಹೊಸಪೇಟೆ ಅಕ್ಕನ ಬಳಗ ಮತ್ತು ವೈದ್ಯರ ತಂಡದಿಂದ ಗರ್ಭಕೋಶ ತಪಾಸಣಾ ಶಿಬಿರ




**ಹಂಪಿ ಟೈಮ್ಸ್ ಹೊಸಪೇಟೆ**

ಮಹಿಳೆಯರಲ್ಲಿ ಗರ್ಭಕೋಶದ ಕ್ಯಾನ್ಸರ್‌ನ ಗುಣಲಕ್ಷಣಗಳು ಕಂಡುಬಂದಲ್ಲಿ ನಿರ್ಲಕ್ಷ್ಯವಹಿಸದೆ ವೈದ್ಯರನ್ನು ಬೇಗ ಸಂಪರ್ಕಿಸಿ ತಪಾಸಣೆಗೊಳಪಟ್ಟರೆ ಆರಂಭದಲ್ಲೆ ರೋಗ ಗುಣಪಡಿಸಲು ಸಾಧ್ಯ ಎಂದು ವೈದ್ಯ ಡಾ.ಹೇಮಲತಾ ಹೇಳಿದರು.

ನಗರದ ಅಕ್ಕನ ಬಳಗವು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಂಗವಾಗಿ ಹಮ್ಮಿಕೊಂಡಿದ್ದ ಗರ್ಭಕೋಶದ ಕ್ಯಾನ್ಸರ್ ತಪಾಸಣೆ ಶಿಬಿರದಲ್ಲಿ ಮಹಿಳೆಯರ ತಪಾಸಣೆ ನಂತರ ಮಾತನಾಡಿದರು. ಭಾರತದಲ್ಲಿ ಶೈಕ್ಷಣಿಕ ಮಟ್ಟ ಹಿಂದುಳಿದಿರುವುದರಿಂದ ಮಹಿಳೆಯರಲ್ಲಿ ಅರಿವಿನ ಕೊರತೆಯಿಂದಾಗಿ ಹೆಚ್ಚಿನವರು ಸಾವಿಗೀಡಾಗುತ್ತಿದ್ದಾರೆ. ವಿಶ್ವದಲ್ಲೇ ಭಾರತ ನಾಲ್ಕನೇ ಸ್ಥಾನದಲ್ಲಿದ್ದು, ಭಾರತದಲ್ಲಿ ವಾರ್ಷಿಕ 60 ಸಾವಿರ ಮಹಿಳೆಯರು ಉಸಿರು ಚೆಲ್ಲುತ್ತಿದ್ದಾರೆ. 21 ರಿಂದ 65 ವರ್ಷದವರಗೆ ಪ್ರತಿ ಮೂರು ವರ್ಷಕ್ಕೊಮ್ಮೆ ಗರ್ಭಕೋಶ ತಪಾಸಣೆ ಮಾಡಿಸಿಕೊಳ್ಳಬೇಕು. ಮದುವೆಯಾದ ಮೂರು ವರ್ಷದ ನಂತರ ತಪಾಸಣೆ ಮಾಡಿಸಿಕೊಳ್ಳವುದು ಒಳಿತು. ತಪಾಸಣೆ ವೇಳೆ ಕ್ಯಾನ್ಸರ್‌ನ ವೈರಸ್ ಕಂಡು ಬಂದಲ್ಲಿ ಹೆಚ್ಚಿನ ತಪಾಸಣೆ, ಚಿಕಿತ್ಸೆ ನೀಡಿ ಗುಣಪಡಿಸಲಾಗುವುದು. ಬಿಳಿಮುಟ್ಟು, ಕಿಬ್ಬೊಟ್ಟೆ ನೋವು ಹೆಚ್ಚಾಗಿ ಕಾಣಿಸಿಕೊಂಡಲ್ಲಿ ಕೂಡಲೇ ವೈದ್ಯರನ್ನು ಸಂಪರ್ಕಿಸಿ ಸಮಾಲೋಚಿಸಿ ಚಿಕಿತ್ಸೆ ಪಡೆಯಬೇಕು ಎಂದು ತಿಳಿಸಿದರು.

ಡಾ.ಅಂಜನಾ ಮಾತನಾಡಿ, ಗರ್ಭಕೋಶ ಕ್ಯಾನ್ಸರ್‌ಗೆ ನಿರ್ಮೂಲನೆಗೆ ಈಗ ಲಸಿಕೆ ಲಭ್ಯವಿದೆ. ಲಸಿಕೆ ಹಾಕಿಸಿಕೊಳ್ಳುವುದರಿಂದ ಶೇ.80 ರಷ್ಟು ಕ್ಯಾನ್ಸರ್ ದೂರಾಗಿಸಬಹುದು. ಪ್ರೌಢಾವಸ್ಥೆಯಲ್ಲೆ ಕಾಣಿಸಿಕೊಂಡಲ್ಲಿ ಲಸಿಕೆ ಹಾಕಿಸಿಕೊಂಡರೆ ಆತಂಕ ಪಡಬೇಕಾಗುವುದಿಲ್ಲ. ದೇವದಾಸಿ ಹಾಗು ಒಬ್ಬರಿಗಿಂತ ಹೆಚ್ಚು ಲೈಂಗಿಕ ಸಂಪರ್ಕವಿದ್ದಲ್ಲಿ ವೈರಸ್‌ನಿಂದ ರೋಗದ ಲಕ್ಷಣಗಳು ಕಾಣಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿರುತ್ತವೆ. ಭವಿಷ್ಯದಲ್ಲಿ ಗರ್ಭಕೋಶ ಕ್ಯಾನ್ಸರ್ ತಡೆಗೆ ಲಸಿಕೆ ಹಾಕುವ ಯೋಜನೆಯೊಂದನ್ನು ಸರ್ಕಾರ ರೂಪಿಸುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ ಎಂದರು.

ಅಕ್ಕನ ಬಳಗದ ಪ್ರಧಾನ ಕಾರ್ಯದರ್ಶಿ ವನಿತಾ ಶಿವಶಂಕರ ಮಾತನಾಡಿ, ಅನೇಕ ಒತ್ತಡಗಳ ಮಧ್ಯೆ ಮಹಿಳೆಯರು ಕಾರ್ಯನಿರ್ವಹಿಸುತ್ತಿರುತ್ತಾರೆ. ಮಹಿಳೆಯರು ತಮ್ಮೊಳಗಿನ ನೋವು ಹೇಳಿಕೊಳ್ಳಲು >>4

# ಬೇಸಿಗೆ ಆರೋಗ್ಯ ರಕ್ಷಣೆಗೆ ಸಲಹೆ ಬಿಸಿಲು ದಿನಗಳಲ್ಲಿ ಛತ್ರಿ ಬಳಸಿರಿ

**ಹಂಪಿ ಟೈಮ್ಸ್ ಹೊಸಪೇಟೆ**

ಪ್ರಸ್ತುತ ಹಾಗೂ ಮುಂಬರುವ ಬೇಸಿಗೆ ದಿನಗಳಲ್ಲಿ ಸೂರ್ಯನ ಶಾಖ ದಿನದಿಂದ ದಿನಕ್ಕೆ ಹೆಚ್ಚಾಗುವ ಹಿನ್ನಲೆಯಲ್ಲಿ ಹೀಟ್ ವೇವ್ (ಶಾಖದ ಹೊಡೆತ) ಹೀಟ್ ವೇವ್ ಸ್ಟ್ರೋಕ್ ನಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಸಾರ್ವಜನಿಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಕೆಲವು ಸಲಹೆಗಳನ್ನು ನೀಡಿದೆ.

ಸಾರ್ವಜನಿಕರು ಬಿಸಿಲು ದಿನಗಳಲ್ಲಿ ಕೊಡೆ (ಛತ್ರಿ) ಬಳಸಿರಿ ಹಾಗೂ ಸಾಧ್ಯವಾದಷ್ಟು ತಂಪಾದ ಸ್ಥಳಗಳಲ್ಲಿ ಉಳಿಯಲು ಪ್ರಯತ್ನಿಸಿ. ತೆಳುವಾದ ಸಡಿಲವಾದ ಹತ್ತಿಯ ಉಡುಪುಗಳನ್ನು ಧರಿಸಿ, ಆದಷ್ಟು ಬಿಳಿ ಬಣ್ಣದ ಬಟ್ಟೆಗಳ ಬಳಕೆ ಒಳ್ಳೆಯದು. ಹತ್ತಿಯ ಅಥವಾ ಟರ್ಬನ್ ಟೋಪಿ ಹಾಗೂ ಕೂಲಿಂಗ್ ಗ್ಲಾಸ್ ಧರಿಸಿರಿ. ಹಿರಿಯ ನಾಗರಿಕರಿಗೆ ಮಕ್ಕಳಿಗೆ ಹೆಚ್ಚು ನೀರು ಕುಡಿಯುಲು ಕೊಡಬೇಕು. ಬೆಳ್ಳಿಗೆ 11 ರಿಂದ ಸಂಜೆ 4 ರವರೆಗೆ ಹೊರಾಂಗಣ ದೈಹಿಕ ಚಟುವಟಿಕೆಯನ್ನು ಕಡಿಮೆ ಮಾಡಲು ಪ್ರಯತ್ನಿಸಿ. ಸಾಕಷ್ಟು ನೀರು ಕುಡಿಯಿರಿ.

ಮಜ್ಜಿಗೆ ಮತ್ತು ಗ್ಲೂಕೋಸ್ ಅಥವಾ ಓ.ಆರ್.ಎಸ್ ನಂತಹ ದ್ರವ ಪದಾರ್ಥಗಳನ್ನು ಹೆಚ್ಚು ಉಪಯೋಗಿಸಿ. ಕೊಠಡಿಯ ತಾಪಮಾನವನ್ನು ಕಡಿಮೆ ಮಾಡಲು ಕಿಟಕಿ, ಛಾಯೆಗಳನ್ನು ಬಳಸಿ. ಫ್ಯಾನ್ ಬಳಕೆದಂತಹ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಿ. ಹೀಟ್ ಸ್ಟ್ರೋಕ್ ಲಕ್ಷಣಗಳನ್ನು ಹೊಂದಿರುವ ವ್ಯಕ್ತಿಯನ್ನು ತಂಪಾದ ಜಾಗಕ್ಕೆ ಸ್ಥಳಾಂತರಿಸಿ.

ಶಾಖದ ಹೊಡೆತದಿಂದ ಬಳಲುತ್ತಿರುವ ವ್ಯಕ್ತಿಯು ಕನಿಷ್ಠ ಬಟ್ಟೆಯನ್ನು ಹೊಂದಿರುವಂತೆ ನೋಡಿಕೊಂಡು, ವ್ಯಕ್ತಿಗೆ ತಣ್ಣೀರಿನಿಂದ ಸ್ಪಾಂಜ್ ಮಾಡಬೇಕು ಅಥವಾ ಐಸ್ ಪ್ಯಾಕಗಳನ್ನು ಉಪಯೋಗಿಸಬಹುದು ಅಥವಾ ವ್ಯಕ್ತಿಯನ್ನು ಐಸ್ ಬ್ಲಾಕ್ ಗಳ ಮಧ್ಯೆ ಇಡಬಹುದು. ಹೀಟ್ ವೇವ್ ಸ್ಟ್ರೋಕ್ ಗೆ ಒಳಗಾದ ವ್ಯಕ್ತಿಗೆ ಯಾವುದೇ ಸುಧಾರಣೆ ಕಂಡುಬರದಿದ್ದರೆ, ಅವರನ್ನು ತಕ್ಷಣ ಆಸ್ಪತ್ರೆಗೆ ಸ್ಥಳಾಂತರಿಸಬೇಕು. ಬೇಸಿಗೆಯಲ್ಲಿ ಹೊರಗಿನಿಂದ ಬಂದ ತಕ್ಷಣ ನೀರು, ಓ.ಆರ್.ಎಸ್ ಅಥವಾ ಮಜ್ಜಿಗೆಯಂತಹ ಪಾನೀಯಗಳನ್ನು ಬಳಸಬಹುದು. ತುರ್ತು ಸೇವೆಗೆ ಶುಲ್ಕ ರಹಿತ ಸಹಾಯವಾಣಿ 1077, ವಾಟ್ಸಾಪ್ ನಂ: 8123244428 ಸಂಪರ್ಕಿಸಿ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


MASSEY FERGUSON

RRR GROUP
RUNNING HARD, DREAMING BIG



**ರೈತರಿಗೆ ವಿಜಯಶ್ರೀ ಮೋಟಾರ್ಸ್‌ನಿಂದ**
**ಮಹಾಕೊಡುಗೆ**
ರೈತನ ರಾಜ MF245 (Quadra PTO) ಆಲ್‌ರೌಂಡರ್ ಟ್ರ್ಯಾಕ್ಟರ್ ಖರೀದಿಸಿ,
ಟ್ರ್ಯಾಕ್ಟರ್‌ನೊಂದಿಗೆ 5ರ ಬಲರಾಮ ಮಡಕಿ ಉಚಿತವಾಗಿ ಪಡೆಯಿರಿ

ಉಚಿತ
TAFE



TP, Registration, Insurance, LTT
10 ದಿನ ಮಾತ್ರ
* ಷರತ್ತುಗಳು ಅನ್ವಯಿಸುತ್ತವೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ: **ವಿಜಯಶ್ರೀ ಮೋಟಾರ್ಸ್ (ಟ್ರ್ಯಾಕ್ಟರ್ ವಿಭಾಗ)**, ಕೊಂಡನಾಯಕನಹಳ್ಳಿ, ಹಂಪಿ ರಸ್ತೆ, ಹೊಸಪೇಟೆ–583239, ಮೊ: 9980127607,7353306719

## ವಚನ ಅರಿವು

### ನಿಯಮ

**ಜಪತಪ ನೇಮವಲ್ಲ,**
**ಮಂತ್ರತಂತ್ರ ನೇಮವಲ್ಲ,**
**ಧೂಪದೀಪಾರತಿ ನೇಮವಲ್ಲ,**
**ಪರಧನ, ಪರಸ್ತ್ರೀ, ಪರದೈವಂಗಳಿಗೆರಗದಿಪ್ಪುದೆ ನೇಮ.**
**ಸೌರಾಷ್ಟ್ರ ಸೋಮೇಶ್ವರಲಿಂಗವಲ್ಲಿದ್ದ ಕಾರಣ ನಿತ್ಯನೇಮ.**
**– ಆದಯ್ಯ**

ಈ ದೇಹ–ಮನಸ್ಸಿನಲ್ಲಿ ಶಿವನಿದ್ದಾನೆ. ಮೋಹದ ಭ್ರಮೆಗೆ ದೇಹ, ಮನಸ್ಸನ್ನು ಕೆಡಿಸಿಕೊಳ್ಳಬಾರದು. ತನ್ನ ಸ್ತ್ರೀಯಲ್ಲದೆ, ಬೇರೆ ಸ್ತ್ರೀಯರ ಮೇಲೆ ಮೋಹಗೊಳ್ಳಬಾರದು. ತಾನು ದುಡಿದು ಗಳಿಸಿದ್ದನ್ನು ಮಾತ್ರ ಸ್ವೀಕರಿಸಬೇಕು. ಬೇರೆಯವರ ಹಣವನ್ನು ಮೋಸ, ವಂಚನೆಯಿಂದ ಕಬಳಿಸಿ ಸುಖ ಪಡಬಾರದು. ತನ್ನ ಇಷ್ಟಲಿಂಗವಲ್ಲದೆ ಕಂಡ ಕಂಡ ದೇವರುಗಳಿಗೆ ಹೋಗಿ ನಡೆದುಕೊಳ್ಳಬಾರದು. ಈ ಆಚಾರವೇ ನಿಜವಾದ ನೇಮವಾಗಿದೆ. ಇದನ್ನು ಬಿಟ್ಟು ಜಪಮಾಡಿ, ತಪವನ್ನು ಆಚರಿಸಿದರೆ ಅದು ನೇಮವಾಗಲಾರದು. ಎಷ್ಟೇ ಮಂತ್ರಗಳನ್ನು ಕಲಿತು ಪಠಿಸಿದರೂ, ತಂತ್ರ ವಿದ್ಯೆಯನ್ನು ಕಲಿತು ದೇವರನ್ನು ಒಲಿಸಲು ಪ್ರಯತ್ನಿಸುವುದು ನೇಮವಲ್ಲ. ವಿಧ ವಿಧದ ಪೂಜೆ, ಧೂಪ, ದೀಪಾರತಿ ಅಭಿಷೇಕದಿಂದಲೂ ದೇವರು ಒಲಿಯುವುದಿಲ್ಲ. ಇದು ಭಕ್ತನ ನೇಮವಲ್ಲ. ಸತ್ಯ, ಶುದ್ಧವಾಗಿರುವುದೆ ಭಕ್ತನಿಗೆ ನಿತ್ಯನೇಮ. ಅರಿವಿನ ಆಚಾರವೇ ನಿತ್ಯನೇಮ. ಇದು ಶರಣರು ಹೇಳಿದ ಇಡೀ ಜೀವನದ ನಿಯಮವಾಗಿದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

### ಮಾತಿನ ಜಾಣ್ಮೆ



■ ದೀಪಶ್ರೀ ಎಸ್ ಕೂಡ್ಲಿಗಿ

ಅಂದು ರಾತ್ರಿ ಸುಖನಿದ್ರೆಗೆ ಜಾರಿದ್ದ ಅಕ್ಬರ್ ಚಕ್ರವರ್ತಿಗೆ ಒಂದು ಕೆಟ್ಟ ಕನಸು ಬಿದ್ದಿತು. ಈ ಕನಸಿನಲ್ಲಿ ಅಕ್ಬರ್ ನ ಕಣ್ಣುಗಳು ಕುರುಡಾಗಿದ್ದವು. ಆದ ಕಾರಣದಿಂದ ಚಕ್ರವರ್ತಿ ಹಗಲು ರಾತ್ರಿ ಎನ್ನದೆ ಕನಸಿನ ಪರಿಣಾಮ ತಿಳಿಯಲು ಚಿಂತಿಸುತ್ತಿದ್ದನು. ತನ್ನ ಕನಸಿನಿಂದ ಭವಿಷ್ಯತ್ತಿನಲ್ಲಿ ಉಂಟಾಗುವ ಪರಿಣಾಮ ಹೇಗಿರಬಹುದು ಎಂದು, ತಿಳಿದುಕೊಳ್ಳಲು ಪ್ರಯತ್ನಿಸಿದನು. ಸೇವಕರನ್ನು ಜ್ಯೋತಿಷಿಗಳ ಹತ್ತಿರ ಕಳುಹಿಸಿ, ಅವರನ್ನು ಆಸ್ಥಾನಕ್ಕೆ ಕರೆತರುವಂತೆ ಆಜ್ಞಾಪಿಸಿದನು. ತನ್ನ ಕನಸಿನಲ್ಲಿ ಕಂಡ ಸಂಪೂರ್ಣ ವಿಷಯವನ್ನು ಜ್ಯೋತಿಷಿಯ ಬಳಿ ಭಯದಲ್ಲಿಯೇ ಹೇಳಿದನು. ನಿಮ್ಮ ಸಮಗ್ರ ವೃತ್ತಾಂತವನ್ನು ನಾನು ಬಲ್ಲೇ ಮಹಾರಾಜ. ಆದರೆ ನನ್ನ ಮೇಲೆ ತಾವು ತೀವ್ರ ಕುಪಿತರಾಗದಿದ್ದರೆ, ನನಗೆ ಯಾವುದೇ ಶಿಕ್ಷೆ ನೀಡದೆ ಇದ್ದರೆ, ನೀವು ಕಂಡ ಕನಸಿನ ಭವಿಷ್ಯತ್ತಿನ ಪರಿಣಾಮ ಹೇಳುತ್ತೇನೆ ಇಲ್ಲವಾದರೆ, ಏನೂ ಹೇಳುವುದಿಲ್ಲ ಭಯದಲ್ಲಿಯೇ ಹೇಳಿದನು ಜ್ಯೋತಿಷಿ. ಇದಕ್ಕೆ ಪ್ರತಿಕ್ರಿಯೆ ನೀಡಿದ ರಾಜ ಇಲ್ಲಾ ಜ್ಯೋತಿಷಿಗಳೇ ನಾನು ಕೋಪ ಮಾಡಿಕೊಳ್ಳುವುದಿಲ್ಲ, ಪರವಾಗಿಲ್ಲ ಸತ್ಯವನ್ನೇ ಹೇಳಿ ಬ್ರಹ್ಮ ಗೀಚಿದ ಹಣೆಬರಹವನ್ನು ಯಾರಿಂದಲೂ ಅಳಿಸಲು ಸಾಧ್ಯವಿಲ್ಲ ಹೇಳಿ ಜ್ಯೋತಿಷಿಗಳೇ ಎಂದಾಗ, ರಾಜನ ಈ ಮಾತುಗಳು ಜ್ಯೋತಿಷಿಗೆ ಸಮಾಧಾನವನ್ನು ನೀಡಿತು.

ಈ ದಿಸೆಯಲ್ಲಿಯೇ ಜ್ಯೋತಿಷಿ ನುಡಿದ. ನೀವು ಬದುಕಿರುವಾಗಲೇ ನಿಮ್ಮ ಕಣ್ಣೆದುರಿನಲ್ಲಿಯೇ ನಿಮ್ಮ ಬಂಧು–ಬಳಗ ಮಕ್ಕಳು ಸಾವನ್ನಪ್ಪುವುದು. ಹೀಗಿದೆ, ಮಹಾರಾಜ ನಿಮ್ಮ ಕನಸಿನ ಪರಿಣಾಮ ಎಂದು ಹೇಳಿದ. ನಿಮ್ಮ ಕನಸಿನ ಪರಿಣಾಮ ನಿಮ್ಮ ಶಾಶ್ವತತೆಯಲ್ಲಿ ನಿಮ್ಮ ಮಕ್ಕಳು ಬಂಧುಗಳ ಅಂತ್ಯ ಎಂದ. ಅಕ್ಬರ್ ಕೋಪದಿಂದ ಸೇವಕರನ್ನು ಕರೆಸಿದ. ಈ ಕೆಟ್ಟ ಜ್ಯೋತಿಷಿಯನ್ನು ವಶಕ್ಕೆ ಪಡೆದು ಈ ಕೂಡಲೇ ಮರಣದಂಡನೆಯ ಶಿಕ್ಷೆಯನ್ನು ನೀಡಿ ಎಂದು ಆದೇಶ ನೀಡಿದ. ಜ್ಯೋತಿಷಿಯು ಎಷ್ಟು ವಿಧವಾಗಿ ಬೇಡಿದರೂ, ಅವನ ಅಹವಾಲಿಗೆ ಚಕ್ರವರ್ತಿಯ ಮನಸ್ಸು ಕರಗಲಿಲ್ಲ.



ಅದೇ ವೇಳೆಗೆ ಆಸ್ಥಾನಕ್ಕೆ ಚಾಣಾಕ್ಷ ಬೀರಬಲ್ ಆಗಮಿಸಿದ. ಜ್ಯೋತಿಷಿಯ ಪರಿಸ್ಥಿತಿಯನ್ನು ಕಂಡು ಒಂದು ಆಲೋಚನೆ ಮಾಡಿದ. ಮರಣದಂಡನೆಯಿಂದ ಜ್ಯೋತಿಷಿಯನ್ನು ಪಾರುಮಾಡಲು ಒಂದು ಉಪಾಯ ಹೂಡಿದ. ಜಾಣ ಬೀರಬಲ್ ಹುಜೂರ್, ನಿಮ್ಮ ಶಿಕ್ಷೆ ವಿರುದ್ಧ ಮಾತನಾಡುತ್ತಿರುವೆ. ಕ್ಷಮೆ ಇರಲಿ ಕನಸಿನ ಪರಿಣಾಮ ಹೇಳುವಾಗ ಜ್ಯೋತಿಷಿಗಳು ಕೊಂಚ ಮಾತಿನಲ್ಲಿ ತಡವರಿಸಿ ಸಣ್ಣ ತಪ್ಪು ಮಾಡಿದ್ದಾರೆ. ನಿಮ್ಮ ಕನಸಿನ ಪರಿಣಾಮ ಹೇಗಿದೆಯೆಂದರೆ, ನೀವು ಹೆಚ್ಚು ಕಾಲ ಬದುಕುವಿರಿ, ನಿಮ್ಮ ಮಕ್ಕಳು ಬಂಧು ಬಳಗಕ್ಕಿಂತ, ನಿಮ್ಮ ಆಯಸ್ಸು ದೊಡ್ಡದು, ನಿಮ್ಮ ಜೀವಿತಾವಧಿಗೆ ಹೋಲಿಕೆ ಮಾಡಿದರೆ ನಿಮ್ಮ ಬಳಗದ ಜೀವಿತಾವಧಿ ಕಡಿಮೆಯಾಗಿರುತ್ತದೆ ಎಂದು ಹೇಳಿದ. ಬೀರಬಲ್ ಮಾತಿಗೆ ಒಪ್ಪಿಗೆ ಸೂಚಿಸಿದ ಅಕ್ಬರ್ ತನ್ನ ದಡ್ಡತನಕ್ಕೆ ಸುಮ್ಮನಾದ. ಬೀರಬಲ್ ತನ್ನ ಮಾತಿನ ಚಾಕಚಕ್ಯತೆಯಿಂದ, ಜ್ಯೋತಿಷಿಯನ್ನು ಶಿಕ್ಷೆಯಿಂದ ಊರ್ಜಿತಗೊಳಿಸಿದ.

ಸಾಧಾರಣ ಮಾತಿಗಿಂತ ಯುಕ್ತಿ ಭರಿತವಾದ ಮಾತೇ ಮುಖ್ಯ. ಸಾಮಾನ್ಯವಾಗಿ ಎಲ್ಲರೂ ಮಾತನಾಡುತ್ತಾರೆ ಆದರೆ, ಮಾತನಾಡುವಾಗ, ಮುಂದಿನ ಭವಿಷ್ಯದ ಪರಿಣಾಮ ಕುರಿತು ಆಲೋಚನೆಗೈಯುವುದು ಒಳಿತು, ನಾವಾಡುವ ಮಾತಿನ ಪ್ರಭಾವ ಮುಂದೆ ಹೇಗಿರುತ್ತದೆ ಎಂದು ಒಮ್ಮೆ ಸಮಗ್ರವಾಗಿ ಯೋಚಿಸಿ, ತರ್ಕಿಸಿ, ವಿಮರ್ಶಿಸಿ ಮಾತಾನಾಡಬೇಕು .ಇಲ್ಲವಾದಲ್ಲಿ, ಮಾತು ನಮಗೆ, ಪರರಿಗೆ ಕೇಡುಕಾದೀತು.

**(ಶಿಕ್ಷಕಿ, ಕಥೆಗಾರ್ತಿ ಹಾಗೂ ಹವ್ಯಾಸಿ ಬರಹಗಾರ್ತಿ)**
**(ನಿಮ್ಮ ಅಭಿಪ್ರಾಯಗಳನ್ನು 9448633038 ಗೆ ವಾಟ್ಸ್‌ಪ್ ಮಾಡಿರಿ)**

### ಬೆಳಕಿನ ಹಾದಿಗೆ ನೀವೂ ಬರೆಯಿರಿ

**ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.**

ಹಂಪಿ ಟೈಮ್ಸ್, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com M: 9448633038

# ಬೇಸಿಗೆ ಶಿಬಿರಗಳು... ಮಕ್ಕಳ ಬೇಯಿಸದಿರಲಿ

ಮಕ್ಕಳೇ, ಎಲ್ಲಾ ಪರೀಕ್ಷೆಗಳು ಮುಗಿಸಿಕೊಂಡು ಬೇಸಿಗೆ ರಜೆಯನ್ನು ಮಜಾ ಮಾಡಲು ಸಿದ್ಧವಾಗುತ್ತಿದ್ದೀರಲ್ಲಾ!. ಶಾಲಾ ದಿನಗಳಲ್ಲಿನ ಓದು, ಬರಹ, ಮನೆಗೆಲಸ, ಪರೀಕ್ಷೆ ಇತ್ಯಾದಿಗಳ ಒತ್ತಡದಿಂದ ಕೆಲ ಕಾಲ ಮುಕ್ತಿ ದೊರೆತಿದೆ. ರಜೆಯಲ್ಲಿ ಏನು ಮಾಡಲಿ ಏನು ಬಿಡಲಿ ಎಂಬುದೇ ಗೊಂದಲದ ಗೂಡಾಗಿದೆ. ಹಕ್ಕಿಗಳಂತೆ ಬಾನಿನೆಲ್ಲಡೆ ಹಾರಬೇಕೆಂಬಷ್ಟು ಉತ್ಸಾಹ ನಿಮ್ಮಲ್ಲಿ ತುಂಬಿ ತುಳುಕುತ್ತಿದೆ. ಆ ಉತ್ಸಾಹದಲ್ಲಿ ನಿಮಗಿರುವ ಆಸಕ್ತಿಯನ್ನು (ಹಾಡುವಿಕೆ, ಚಿತ್ರ ಬರವಣಿಗೆ, ಕ್ರೀಡೆ. . . . ) ಇತರರೆದುರು ಪ್ರದರ್ಶಿಸಲು ಈ ಸಾಲಿನ ರಜೆಯನ್ನು ಬಳಸಿಕೊಳ್ಳಬಹುದು. ಅದಕ್ಕೆ ಪೂರಕವಾಗಿ ತರಬೇತಿ ಮುಂತಾದ ನೆರವನ್ನು ಪಾಲಕರು, ಶಿಕ್ಷಕರು, ಸ್ನೇಹಿತರು, ಇತರರರಿಂದ ಪಡೆಯಬಹುದು. ನಿಮ್ಮಲ್ಲಿರುವ ಪ್ರತಿಭೆಯನ್ನು ಬೆಳಕಿಗೆ ತರಲು ಬೇಸಿಗೆ ಶಿಬಿರಗಳು ಸಹಕಾರಿಯಾಗಿವೆ. ಅಂತಹ ಶಿಬಿರಗಳು ನಿಮ್ಮ ಕೈಗೆ ನಿಲುಕುವಂತಿದ್ದರೆ ಆ ಅವಕಾಶವನ್ನು ಕಳೆದುಕೊಳ್ಳಬೇಡಿರಿ.

ಬೇಸಿಗೆ ಶಿಬಿರಗಳಲ್ಲಿ ಮಕ್ಕಳು ಸ್ವತಂತ್ರವಾಗಿ, ಆನಂದದಿಂದ ಯಾವುದೇ ಪರೀಕ್ಷೆಯ ಭಯವಿಲ್ಲದೇ ಕಲಿಯಬೇಕು. ಅಲ್ಲಿ ನೀವು ಇಂತಹುದ್ದನ್ನ, ಇಷ್ಟೇ ಕಡ್ಡಾಯವಾಗಿ ಕಲಿಯಬೇಕೆಂಬ ನಿಯಮವಿರುವುದಿಲ್ಲ. ನಿಮಗೆ ಇಷ್ಟವಾದುದನ್ನು ಬೇಕಾದಷ್ಟು ಕಲಿಯಬಹುದು. ಅಕ್ಷರ ಸಹ ನೀವು ಬಾನಾಡಿಗಳಂತೆ ಯಾವುದೇ ನಿರ್ಭಂಧವಿಲ್ಲದೇ ಹಾರಾಡಬಹುದು.

ನಿಮ್ಮ ಭವಿಷ್ಯಕ್ಕೆ ನೀರೆರೆಯುವಂತ ಬೇಸಿಗೆ ಶಿಬಿರಗಳನ್ನು ಇತ್ತೀಚಿನ ದಿನಗಳಲ್ಲಿ ಹಣಕ್ಕಾಗಿ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ನಗರಗಳಲ್ಲಂತೂ ಖಾಸಗಿ ಸಂಸ್ಥೆಗಳು ವಸೂಲಿ ದಂಧೆಗಾಗಿ ಈ ಶಿಬಿರ ನಡೆಸುವುದು ಗುಟ್ಟೇನಲ್ಲ. ಇನ್ನು ಕೆಲವು ಶಿಬಿರಗಳು ಸ್ವತಂತ್ರವಾಗಿ ಹಾರುವ ಚಿಟ್ಟೆಗಳನ್ನು ಪಂಜರದಲ್ಲಿಟ್ಟು ಹಾರುವುದನ್ನು ಕಲಿಸುವ ಪ್ರಯತ್ನದಂತೆ ನಡೆಯುತ್ತಿರುತ್ತವೆ. ನೀವು ಬೇಸಿಗೆ ಶಿಬಿರಕ್ಕೆ ಸೇರುವ ಮುನ್ನ ಸರಿಯಾದ ಮಾಹಿತಿ ಪಡೆದು ನಿಮಗೆ ಸರಿ ಎನಿಸಿದರೆ ಮಾತ್ರ ಸೇರಿದರೆ ಒಳಿತಲ್ಲವೇ?.



ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹ.ಬೊ.ಹಳ್ಳಿ

ಬೇಸಿಗೆ ಶಿಬಿರದಲ್ಲಿ ನಿಮಗೆ ಸಂತಸ ನೀಡುವಂತಹ ಕಥೆ, ಜಾನಪದ ಅಟ, ಚಿತ್ರಕಲೆ, ಹಾಡು, ಕುಣಿತ, ಅಭಿನಯ, ಸ್ಕೇಟಿಂಗ್, ಅರ್ಚರಿ, ಗಣಕಯಂತ್ರ, ಮೋಜಿನ ಗಣಿತ, ವಿನೋದ ವಿಜ್ಞಾನ, ಪವಾಡ ಬಯಲು, ಆಟಿಕೆಗಳ ತಯಾರಿಕೆ, ಕವನ ರಚನೆ, ಓರಿಗಾಮಿ, ಮಣ್ಣಿನಲ್ಲಿ ವಸ್ತುಗಳ ತಯಾರಿ, ಪುಸ್ತಕ ಓದು, ಹೊರ ಸಂಚಾರ, ನಮ್ಮೂರು ನಮ್ಮ ಜನ, ಮುಕ್ತ ಸಂವಾದ, ಈಜು, ಯೋಗಾಸನ. . . . . .ಈ ತರಹದ ಅನೇಕ ವಿಭಾಗಗಳಿರುತ್ತವೆ. ನಿಮಗೆ ಆಅಸಕ್ತಿ ಇರುವ ಕ್ಷೇತ್ರಗಳು ಶಿಬಿರದಲ್ಲಿರುವುದನ್ನು ದೃಢಪಡಿಸಿಕೊಂಡು ಸೇರಿದರೆ ರಜೆ ಸಜೆಯಾಗದೇ ಸಂತಸ ತರುತ್ತದೆ.

ಬೇಸಿಗೆ ಶಿಬಿರಗಳು ಹೆಚ್ಚಾಗಿ ಯಾವುದಕ್ಕೆ ಆದ್ಯತೆ ನೀಡಿರುತ್ತವೆ ಎಂಬ ಪ್ರಶ್ನೆ ನಿಮ್ಮ ಮನದಲ್ಲಿ ಬಂದಿದೆ ಅಲ್ಲವೇ?. ಅದಕ್ಕೆ ಅಲ್ಲಿ ನೀಡಲಾಗುವ ತರಬೇತಿಗಳತ್ತ ಒಂದು ಸುತ್ತು ಹಾಕಿಕೊಂಡು ಬರೋಣ ಬನ್ನಿ. ಅವುಗಳಲ್ಲಿ ನಿಮಗೆ ಪ್ರಿಯವಾದದ್ದೂ ಇದ್ದೇ ಇರುತ್ತದೆ.

#### ಕಥಾಲೋಕ

ಕಥೆಗಳೆಂದರೆ ಅಜ್ಜನಿಂದಿಡಿದು ನಿಮ್ಮ ಪಾಪುವಿನ ವರೆಗೂ ಸೇರಿದಂತೆ ಎಲ್ಲರಿಗು ಪಂಚಪ್ರಾಣ. ಈ ವಿಭಾಗದಲ್ಲಿ ವಿವಿಧ ಬಗೆಗಳನ್ನು ಗುರುತಿಸಲಾಗಿದೆ. ಜನಪದ, ಮೌಲ್ಯಯುತ, ಪ್ರಾಣಿಗಳ, ವಿದೇಶಗಳ, ಫ್ಯಾಂಟಸಿ ಮುಂತಾದ ಕಥೆಗಳನ್ನು ರಂಜಕವಾಗಿ ಹೇಳಬಹುದು ಮತ್ತು ಕೇಳಬಹುದು. ನಿಮಗೆಲ್ಲಾ ಕಥೆಗಳು ವಿಭಿನ್ನ ಲೋಕವನ್ನು ಪರಿಚಯಿಸುತ್ತದೆ. ಸಾಧ್ಯವಾದರೇ ನೀವೇ ಸ್ವತಃ ಹೊಸ ಕಥೆ ಕಟ್ಟುವ ಪ್ರಯತ್ನಕ್ಕೂ ಕೈ ಹಾಕಬಹುದು. ಇದರಲ್ಲಿ ಸ್ವಲ್ಪ ಆಸಕಿ ಇದ್ರೆ ಸಾಕು ಕಥೆಗಳೇ ನಿಮ್ಮನ್ನು ಮುಂದಕ್ಕೆ ಕರೆದುಕೊಮಡು ಹೋಗುತ್ತವೆ.

#### ಜನಪದ ಅಟ

ನಮ್ಮ ಹಳ್ಳಿಯಲ್ಲಿದ್ದ ಆಟಗಳನ್ನು ಕ್ರಿಕೇಟ್ ಮತ್ತು ದೂರದರ್ಶನಗಳು ಕಸಿದು ಕೊಂಡಿವೆ. ಗ್ರಾಮೀಣ ಪ್ರದೇಶದ ಜನಪದ ಆಟಗಳಿಗೆ ಮರುಜೀವ ಕೊಡುವ ಕೆಲಸ ಈ ರಜೆಯಲ್ಲಿ ನೀವು ಮಾಡಬಹುದು. ಗೋಲಿ, ಚಿಣ್ಣಿದಾಂಡು, ಕಣ್ಣಾಮುಚ್ಚಾಲೆ, ಚೌಕಾಬಾರ, ವಟ್ಟಪ್ಪ, ಕೋಲ್ ಚಿಮ್ಮ ಆಟ, ಕುಂಟಾಬಿಲ್ಲೆ, ಮರಕೋತಿ ಅಟ, ಹಗ್ಗದಾಟ, ಕಣ್ ಕಟ್ಟ ಅಟ, ಜೋಡಿ ಮುಟ್ಟಾಟ, ಉಪ್ಪಾಟ, ಮೀನು ಬಲೆ, ಲಗೋರಿ, ಮೂರುಕಾಲು ಓಟ, ಚಾವಿ, ಆನೆಪೊಳ್ಳು, ಬಳೆಚೂರುಆಟ, ಬಗುರಿ, ಹಾವು ಏಣಿ, ಗಾಲಿ ಆಟ, ರೈಲಾಟ, ಜೋಕಾಲಿ, ಕಪ್ಪೆ ಓಟ. . . . ಇಂತಹ ಬಗೆ ಬಗೆಯ ಆಟಗಳಿವೆ. ಅವನ್ನು ಅಡುವ ನಿಯಮಗಳನ್ನು ತಿಳಿದರೆ ಸಾಕು, ಸರಳವಾಗಿ ಆಡಬಹುದು. ಈ ಅಟಗಳಲ್ಲಿ ಸಿಗುವ ಕುಷಿ ನೀವು ಅಡಿ ಅನುಭವಿಸಿದಾಗಲೇ ಸಿಗುವುದು.

#### ಮೋಜಿನ ಗಣಿತ–ವಿನೋದ ವಿಜ್ಞಾನ

ಗಣಿತ ಮತ್ತು ವಿಜ್ಞಾನ ತರಗತಿಯಲ್ಲಿ ಕಠಿಣ ವಿಷಯಗಳು. ಆದರೆ ಅವುಗಳಲ್ಲಿ ವಿಶೇಷವಾದ ಮತ್ತು ಮೋಜನ್ನು ಕೊಡುವ ಅನೇಕ ಅಂಶಗಳು ಇವೆ. ಉದಾಹರಣೆಗೆ ಪ್ರಾಣಿಗಳು ಬಣ್ಣದ ವಸ್ತುವನ್ನು ಗರುತಿಸಲಾರವು. ಅವುಗಳ ಕಣ್ಣು ಕಪ್ಪು–ಬಿಳುಪನ್ನು ಮಾತ್ರ ಗುರುತಿಸುತ್ತವೆ. ಪವಾಡ ಬಯಲು, 91ರ ಮಗ್ಗಿ ಸುಲಭ ಕಲಿಕೆ, ಪೇಪರ್ ಮಡಿಚಿ ಮಡುವ ಓರಿಗಾಮಿ . .ಇವು ನಿಮಗೆ ವಿನೋದವನ್ನು ನೀಡುವುದರ ಜೊತೆಗೆ ಕಲಿಕೆಯನ್ನೂ ಮಾಡಿಸುತ್ತವೆ. ಯಾಕೆ ನೀವು ಕೂಡಾ ಒಂದು ಕೈ ನೋಡಬಾರದು.

#### ಹಾಡು–ಕುಣಿತ

ನಿಮಗೆಲ್ಲಾ ಹಾಡುಗಳು ಅಚ್ಚು ಮೆಚ್ಚು. ಕೆಲವರಿಗೆ ಕನ್ನಡದ ಹಡುಗಳು ಇಷ್ಟವಾದರೆ, ಇನ್ನು ಕೆಲವರಿಗೆ ಇಂಗ್ಲೀಷ್ ರೈಮ್ಸ್‌ಗಳು ಹೆಚ್ಚು ಪ್ರೀತಿಸುತ್ತಾರೆ. ನಿಮಗೆ ಇಷ್ಟವಾದ ಹೊಸ ಹೊಸ ಹಡುಗಳನ್ನು ಕಲಿಯಲು ಬೇಸಿಗೆ ಶಿಬಿರಗಳು ಹೆಚ್ಚು ಅನುಕೂಲಕಾರಿ. ಕೆಲವು ಶಿಬಿರಗಳಲ್ಲಿ ಹಾಡಿನ ಜೊತೆಗೆ ನೃತ್ಯವನ್ನೂ ಕಲಿಸುತಾರೆ. ಹಾಗಾದಲ್ಲಿ ಆ ಹಾಡುಗಳನ್ನು ನೀವು ಮರೆಯುವುದೇ ಇಲ್ಲ. ಹಾಡು–ನೃತ್ಯಗಳಲ್ಲಿ ನಿಮಗೆ ಸರಿಯಾದ ತರಬೇತಿ ಸಿಕ್ಕಲ್ಲಿ, ನಿಮ,ಗೆ



ಅವುಗಳತ್ತ ಹೆಚ್ಚು ಒಲವಿದ್ದಲ್ಲಿ ಬೆಸಿಗೆ ಶಿಬಿರ ಒಮದು ವೇದಿಕೆಯಾಗುತ್ತದೆ. ಅದನ್ನು ನೀವು ಸರಿಯಾಗಿ ಬಳಸಿಕೊಂಡಲ್ಲಿ, ಮುಂದೆ ಆ ರಂಗದಲ್ಲಿ ನೀವು ಬಹು ದೊಡ್ಡ ಹೆಸರನ್ನು ಮಾಡುವ ಅವಕಾಶ ನಿಮ್ಮದಾಗಬಹುದು.

#### ಅಭಿನಯ

ಸಿನೇಮಾ ನೋಡಿ ಅಲ್ಲಿನ ನಟರಂತೆ ನೀವು ಪದೇ ಪದೇ ಮಾಡುತ್ತಿರುತ್ತೀರಿ. ಅನುಕರಣಾ ಗುಣ ಎಲ್ಲರಲ್ಲೂ ಸಹಜವಾಗಿ ಬಂದಿರುತ್ತದೆ. ಆರಂಭದಲ್ಲಿ ಅನುಕರಣೆಯಿಂದ ಅಭಿನಯ ಬಂದರೆ, ನಂತರ ನೀವೇ ಸ್ವತಂತ್ರವಾಗಿ ಅಭಿನಯಿಸಬಹುದು. ಇದನ್ನು ನೀವು ಸರಿಯಾಗಿ ಬಳಸಿಕೊಂಡಲ್ಲಿ ಎಲ್ಲರೂ ಮೆಚ್ಚುವ ನಟರಾಗಬಹುದು. ಅದರಲ್ಲೂ ಮಕ್ಕಳ ನಾಟಕಗಳನ್ನು ಆಯ್ದುಕೊಂಡು ಪ್ರದರ್ಶನ ನೀಡಿದರೆ ನಿಮ್ಮ ಪ್ರತಿಬೆಗೆ ಸಾಣೆ ಹಿಡಿದಂತಾಗುತ್ತದೆ.

#### ಗಣಕ ಯಂತ್ರ

ಇಂದಿನ ಯುಗವನ್ನು ಕಂಪ್ಯೂಟರ್ ಯುಗವೆನ್ನುತ್ತೇವೆ. ಕಂಪ್ಯೂಟರ್ ಜ್ಞಾನ ಇಲ್ಲದವರು ಅನಕ್ಷರಸ್ಥರು ಎನ್ನಲಾಗುತ್ತಿದೆ. ಅದಕ್ಕೆ ಬೇಸಿಗೆ ಶಿಬಿರಗಳಲ್ಲಿ ಗಣಕಯಂತ್ರದ ಸರಿಯಾದ ಪರಿಚಯ ಮಾಡಿಕೊಡುತ್ತಾ, ಬಳಕೆಯನ್ನು ಹೇಳಿಕೊಡಲಾಗುತ್ತದೆ ಎಂಬುದನ್ನು ಪರೀಕ್ಷಿಸಿ ಖಾತ್ರಿ ಪಡಿಸಿಕೊಂಡು ಒಳಗಡೆ ಪ್ರವೇಶಿಸಿರಿ. ಅಲ್ಲಿ ಚಿತ್ರ ಬಿಡಿಸುವ, ಅಕ್ಷರಗಳ ಬರವಣಿಗೆ, ಆಟಗಳ ಜೊತೆಗೆ ಅಂತರ್ ಜಾಲವನ್ನು ಜಾಲಾಡುವ ವಿಧಾನವನ್ನು ಕ್ಯಾಂಪ್ ನಲ್ಲಿ ತಿಳಿಸುವಂತಿರಬೇಕು. ಅತ್ಯುಪಯುಕ್ತವಾದ ವೆಬ್ ತಾಣಗಳನ್ನು ಹುಡುಕುವ ರೀತಿಗಳನ್ನು ಮನನ ಮಾಡಿಸಿದರೆ ಹೆಚ್ಚು ಫಲಕಾರಿಯಾಗುತ್ತದೆ.

#### ಚಿತ್ರ–ಬಣ್ಣದ ಅಟ

ಚಿತ್ರ ಹಾಗೂ ಬಣ್ಣಗಳು ನಿಮಗೆಲ್ಲಾ ಹೆಚ್ಚು ಆತ್ಮೀಯವಾದವು. ಅನೇಕ ಮಕ್ಕಳು ಪ್ರತಿಭಾವಂತ ಚಿತ್ರಕಾರರಾಗಿದ್ದರೂ ಸರಿಯಾದ ಅವಕಾಶವಿಲ್ಲದೇ ಸೊರಗಿದ ಉದಾಹರಣೆಗಳು ನಮ್ಮಲ್ಲಿ ಹೆಚ್ಚು. ಅದಕ್ಕೆ ನಿಮಗೆ ಚಿತ್ರ ಬಿಡಿಸುವಿಕೆಯಲ್ಲಿ ಆಸಕ್ತಿ ಇದ್ದರೆ ಶಿಬಿರಕ್ಕೆ ಬರುವ ಕಲಾವಿದರಿಂದ ಸ್ಪೂರ್ತಿ ಪಡೆಯಬಹುದು. ಅನುಭವಿ ಚಿತ್ರಕಲಾವಿದರಿಂದ ಚಿತ್ರ ಬರೆವ ವಿಧಾನಗಳು, ಅದಕ್ಕೆ ಹೇಗೆ ಬಣ್ಣವನ್ನು ತುಂಬಬೇಕು ಎಂಬಂತಹ ಮಹತ್ವದ ಅಂಶಗಳನ್ನು ನಿಮಗೆ ನೇರವಾಗಿ ತಿಳಿಸಲು ಬೇಸಿಗೆ ಶಿಬಿರವು ಉತ್ತಮ ಅವಕಾಶ ಒದಗಿಸುತ್ತವೆ.

#### ಓದೋಣ ಪುಸ್ತಕ

ಶಾಲಾ ಅವಧಿಯಲ್ಲಿ ಬಹುತೇಕ ಸಮಯವನ್ನು ಪಠ್ಯಪುಸ್ತಕ ಓದಿಗಾಗಿ ಮೀಸಲಿಟ್ಟಿರುತ್ತೀರಿ. ಕೆಲವರಿಗೆ ಪಠ್ಯ ಹೊರತಾಗಿ ಬೇರೆ ರೀತಿಯ ಪುಸ್ತಕಗಳಿವೆ ಎಂಬುದರ ಅರಿವೇ ಇರುವುದಿಲ್ಲ. ಅದಕ್ಕೆ ಸಾಹಿತ್ಯದ ಎಲ್ಲ ಪ್ರಕಾರಗಳ ಜೊತೆಗೆ ನಿಮಗೆ ಓದಲು ಸರಳವಾದ ಪುಸ್ತಕಗಳ ಕುರಿತಾದ ಮಾರ್ಗದರ್ಶನ ಬೇಸಿಗೆ ಶಿಬಿರದಲ್ಲಿ ಪಡೆಯಬಹುದು. ಇದಕ್ಕೆ ಹಿರಿಯರ ನೆರವನ್ನೂ ಪಡೆಯಬಹುದು. ನೀವು ಸ್ವತಂತ್ರವಾಗಿ ನಿಮಗಿಷ್ಟವಾದ ಪುಸ್ತಕಗಳನ್ನು ಈ ರಜೆಯಲ್ಲಿ ತಪ್ಪದೇ ಓದಿರಿ. ಓದಿದ ನಂತರ ಸಧ್ಯವಾದರೆ ಅದರ ಬಗ್ಗೆ ಒಂದು ಪುಟದಷ್ಟು ಮಾಹಿತಿ ಬರೆದರೆ ಅದು ಮುಂದಿನ ದಿನಗಳಲ್ಲಿ ನಿಮ್ಮ ನೆರವಿಗೆ ಬಂದೇ ಬರುತ್ತದೆ.

#### ಸಾಹಿತ್ಯ ಲೋಕ

ಕಥೆ, ಕವನ, ಲೇಖನ ಬರೆವ ಶಕ್ತಿ ನನ್ನಲ್ಲಿ ಇಲ್ಲ ಎಂದು ಅನೇಕ ಮಕ್ಕಳು ಭಾವಿಸುತ್ತಾರೆ. ಆದರೆ ಅದು ಶುದ್ಧ ಸುಳ್ಳು. ಪ್ರತಿಯೊಬ್ಬರಲ್ಲೂ ಆ ಪ್ರತಿಭೆ ಇದ್ದೇ ಇರುತ್ತದೆ. ಆದರೆ ಅದಕ್ಕೆ ಸರಿಯಾದ ಅವಕಾಶ, ಸಮಯ ದೊರೆತಿರುವುದಿಲ್ಲ ಅಷ್ಟೆ. ಆ ಕೊರತೆಯನ್ನು ಬೆಸಿಗೆ ಶಿಬಿರಗಳು ತುಂಬಿ ಕೊಡುತ್ತವೆ. ಕ್ಯಾಂಪ್‌ಗಳಲ್ಲಿ ಕಾವ್ಯ ಕಟ್ಟುವ ವಿಧಾನ, ಕಥೆಗಳ ಹೆಣೆವ ಬಗೆ, ಲೇಖನಗಳ ಬರೆವ ಕುರಿತು ಹಿರಿಯರಿಂದ ಮಾರ್ಗದರ್ಶನ ನಿಮಗೆ ಸಿಕ್ಕಲ್ಲಿ ನಿಮ್ಮ ಪ್ರತಿಭೆ ತಾನಾಗಿಯೇ ಅರಳುತ್ತದೆ.

#### ಹೊರ ಸಂಚಾರ

ಬೇಸಿಗೆ ಶಿಬಿರದ ದಿನಗಳಲ್ಲಿ ಒಂದು ದಿನ ಹತ್ತಿರ ವಿರುವ ಉತ್ತಮ ಪ್ರವಾಸಿ ತಾಣ, ಪ್ರಕೃತಿ ತಾಣ, ಐತಿಹಾಸಿಕ ಸ್ಥಳ, ಪ್ರಾಣಿ ಸಂಗ್ರಹಾಲಯ, ಮ್ಯೂಜಿಯಂ. . .ಇತ್ಯಾದಿಗಳಿಗೆ ನಿಮ್ಮನ್ನು ಕರೆದುಕೊಂಡು ಹೋಗುವಂತೆ ಒತ್ತಾಯ ಮಾಡಿರಿ. ಅಲ್ಲಿ ದೋಣಿ ವಿಹಾರಕ್ಕೆ, ಬೆಟ್ಟ ಹತ್ತುವುದಕ್ಕೆ ಅವಕಾಶ ವಿದ್ದರೆ ಅದನ್ನು ತಪ್ಪಿಸಿಕೊಳ್ಳಬೇಡಿರಿ. ಅವು ನಿಮ್ಮಲ್ಲಿನ ಏಕಕತಾನನತೆಯನ್ನು ಹೋಗಲಾಡಿಸಿ, ಹೊಸದನ್ನು ಅನ್ವೇಷಿಸುವ ಕೌಶಲವನ್ನು ಬೆಳೆಸುತ್ತವೆ.

#### ನಮ್ಮೂರು ನಮ್ಮ ಜನ

ನಗರದ ಬಹುತೇಕ ಮಕ್ಕಳಿಗೆ ಹಳ್ಳಿ ಬದುಕಿನ ಅರಿವಿರುವುದಿಲ್ಲ. ಅದರಲ್ಲೂ ಕೃಷಿ ಬದುಕಿನ ಬಗ್ಗೆ ಗೊತ್ತಿರುವುದಿಲ್ಲ. ಗೃಹ ಕೈಗಾರಿಕೆಗಳ ಜ್ಞಾನ ವಿರುವುದಿಲ್ಲ. ವಿವಿಧ ಕಸುಬಗಳ ಮಾಹಿತಿ ಇರುವುದಿಲ್ಲ. ಅದೇ ರೀತಿ ಹಳ್ಳಿಯವರಿಗೆ ಪಟ್ಟಣದ ಸೌಲಭ್ಯಗಳ ಪರಿಚಯ ವಿರುವುದಿಲ್ಲ. ಅಲ್ಲಿರುವ ಕಛೇರಿಗಳ ಬಗ್ಗೆ ಗೊತ್ತಿರುವುದಿಲ್ಲ. ಹಾಗಾಗಿ ನೀವು ಸೇರಬಯಸುವ ಬೇಸಿಗೆ ಶಿಬಿರಗಳಲ್ಲಿ ಇಂತಹ ಸುವರ್ಣ ಅವಕಾಶ ಸಿಕ್ಕರೆ ತಪ್ಪಿಸಿ ಕೊಳ್ಳಬೇಡಿರಿ. ಇಂತಹ ಅವಕಾಶ ಶಿಬಿರದಲ್ಲಿ ಮಾಡದಿದ್ದಲ್ಲಿ ನೀವೇ ಅವರಿಗೆ ತಿಳಿಸಿ ಎಲ್ಲರಿಗೂ ನಮ್ಮೂರು–ನಮ್ಮಜನದ ಪರಿಚಯ ಆಗುವಂತೆ ಮಾಡಿರಿ. ಆಗುವ ಸಿಗುವ ಮಜಾ ನೋಡಿರಿ.

#### ಮುಕ್ತ ಸಂವಾದ/ಚರ್ಚೆ/ಭಾಷಣ

ನಿಮ್ಮಲ್ಲಿ ಅನೇಕ ಸಮಸ್ಯೆ, ನೋವು, ವಿಚಾರ, ಕುತೋಹಲಗಳು ಮನೆ ಮಾಡಿರುತ್ತವೆ. ದೊಡ್ಡವರು ನಿಮ್ಮನ್ನು ಪ್ರಶ್ನೆ ಕೇಳಲು ಬಿಡದೆ ಬಾಯಿ ಮುಚ್ಚಿಸುವ ಕೆಲಸವನ್ನೆ ಹೆಚ್ಚಾಗಿ ಮಾಡುತ್ತಾರೆ. ಬೇಸಿಗೆ ಶಿಬಿರಗಳಲ್ಲಾದರೂ ನಿಮಗೆ ಮುಕ್ತ ಅವಕಾಮಿರುವುದನ್ನು ಸರಿಯಾಗಿ ಬಳಸಿಕೊಳ್ಳಿ. ತಜ್ಞರು ನಿಮ್ಮ ಸಂದೇಹಗಳಿಗೆ ಪರಿಹಾರಗಳನ್ನು ಸೂಚಿಸುತ್ತಾರೆ. ನಿಮ್ಮ ಹಕ್ಕುಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಕುತೋಹಲಗಳಿಗೆ ಸರಿಯಾದ ಮಾರ್ಗದರ್ಶನ ಸಿಕ್ಕರೆ ಸಾಕು, ನೀವೇ ಅದನ್ನು ತಣಿಯುವ ಹಾದಿಯನ್ನು ಶೋಧನೆ ಮಾಡುತ್ತೀರಿ. ನಿಮಗೆ ನಿಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ಭಾಷಣರೂಪದಲ್ಲಿ ಅಭಿವ್ಯಕ್ತಿಸಲು ವೇದಿಕೆ ಇದ್ದೇ ಇರುತ್ತದೆ. ಅಂಜದೆ ಮುನ್ನುಗ್ಗಿದಲ್ಲಿ ಮುಂದೆ ದೊಡ್ಡ ಸಭೆ ಸಮಾರಂಭಗಳಲ್ಲಿ ಮಾತನಾಡುವ ಶಕ್ತಿ ನಿಮ್ಮಲ್ಲಿ ಮನೆ ಮಾಡುತ್ತದೆ.

ಅಬ್ಬಾ! ಬೇಸಿಗೆ ಶಿಬಿರಗಳಲ್ಲಿ ಇಷ್ಟೆಲ್ಲಾ ಕಲಿಯ ಬಹುದೆಂಬುದು ನನಗೆ ಗೊತ್ತೇ ಇರಲಿಲ್ಲ ಅನ್ನುತ್ತೀರುವಿರಲ್ಲಾ. ಇವುಗಳ ಹೊರತಾಗಿ ಕಾಗದಗಳನ್ನು ಬಳಸಿ ಮಾಡಬಹುದಾದ ಓರಿಗಾಮಿ, ಮಣ್ಣನ್ನು ಬಳಸಿ ವಿವಿಧ ರೀತಿಯ ವಸ್ತುಗಳನ್ನು ತಯಾರಿಸುವ ಕೌಶಲ, ಸುಲಭವಾಗಿ ಮತ್ತು ಅಗ್ಗವಾಗಿ ದೊರೆವ ಸಾಮಾಗ್ರಿಗಳ ಬಳಸಿ ಅಟಿಕೆಗಳನ್ನು ತಯಾರಿಸುವುದು, ನೀರಿನ ಸೌಕರ್ಯವಿದ್ದರೆ ಈಜನ್ನು ಕಲಿಸುವುದು, ಸರಳ ಯೋಗಾಸನ, ಆರೋಗ್ಯದ ಸೂತ್ರಗಳು, ಮನೆ ಮದ್ದು, ಸ್ಕೆಟಿಂಗ್, ಅರ್ಚರಿ ಹೀಗೆ ಇನ್ನು ಹತ್ತು ಹಲವಾರನ್ನು ಬೇಸಿಗೆ ಶಿಬಿರಗಳಲ್ಲಿ ಕಾಣಬಹುದು.

#### ಕೊನೆಯ ಗುಟುಕು

ಒಂದು ಬೇಸಿಗೆ ಶಿಬಿರದಲ್ಲಿ ಸಾಕಷ್ಟು ಚಟುವಟಿಕೆಗಳನ್ನು ಹಮ್ಮಿಕೊಂಡಿರುತ್ತಾರೆ. ಅಲ್ಲಿನ ಸೌಕರ್ಯಗಳಿಗೆ ಹೊಂದಿಕೊಂಡು ಬೇರೆಬೇರೆಯವನ್ನೂ ಅವರು ಹಮ್ಮಿಕೊಂಡಿರುತ್ತಾರೆ. ಮಕ್ಕಳೆ ನೀವು ಗಮನಿಸಬೇಕಾದ ಮಹತ್ತರ ಅಂಶವೆಂದರೆ " Master of all none of one" ಎಂಬಂತೆ ಅನೇಕ ಚಟುವಟಿಕೆಗಳಲ್ಲಿ ತೊಡಗಿಕೊಂಡು ಗೊಂದಲಕ್ಕೆ ಬೀಳದೆ, ನಿಮಗೆ ಪ್ರಿಯವಾದ ಅಥವಾ ಅಗತ್ಯತೆ ಅನುಗುಣವಾಗಿರುವ ಒಂದು ಅಥವಾ ಎರಡು ಚಟುವಟಿಕೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳಿ. ಅದಕ್ಕೆ ಪೂರಕವಾಗಿರುವ ಬೇಸಿಗೆ ಶಿಬಿರಕ್ಕೆ ಸೇರಿದಲ್ಲಿ ನಿಮ್ಮ ಜೀವನೋತ್ಸಾಹ ಇಮ್ಮಡಿ ಗೊಳ್ಳುತ್ತದೆ. ಮಕ್ಕಳೇ ಈ ಹಾದಿಯಲ್ಲಿ ನಿಮ್ಮಗಳ ಪಯಣ ಸಾಗಲಿ. ಈ ಸಾಲಿನ ರಜೆಯ ಬೇಸಿಗೆ ಶಿಬಿರವು ನಿಮ್ಮ ಬದುಕಿಗೆ ಒಂದು ದಿಕ್ಸೂಚಿಯಾಗಲಿ.

ಕವಿ ಮನಸು

## ಈಟಿನ ಗಿಡ



ಈಟಿನ ಗಿಡವಿದು ಚಂದದಿ ಚಿಗುರಿದೆ
ಸಾಟಿಯು ಇಲ್ಲದೆ ಸೊಗಸಾಗಿ
ತೋಟದಿ ಬೆಳೆಯುವ ಗಿಡಕಿದು
ಪೋಷಣೆ
ಕಾಟವ ನೀಡದು ಕಳೆಯಾಗಿ


ಕೋಟೆಯ ಸುತ್ತಲು ಕೊಂಚವೆ ಮಣ್ಣಲಿ
ನಾಟಿದರಾಯಿತು ಬೆಳೆಯುವುದು
ಕೋಟೆಗೆ ಬೇಲಿಯ ರೂಪದಿ ಬೆಳೆದರೆ
ದಾಟಲು ಬಿಡದಿಹ ಭದ್ರತೆಯು

ಮಳೆಯಲಿ ದೊರೆಯುವ ನೀರನು
ಬಳಸುತ
ಬೆಳೆವುದು ತಾನೇ ಚಂದದಲಿ
ಬೆಳೆಗಳ ಗಿಡಕಿದು ಉತ್ತಮ ಗೊಬ್ಬರ
ಕೊಳೆತಿಹ ಈ ಗಿಡದೆಲೆಗಳಲಿ

ಸಾಕುವ ಸಲಹುವ ಪ್ರೀತಿಯ ಬಯಸದು
ಸಾಕೆನುವಷ್ಟರ ಹಸಿರಿಹುದು
ಬೇಕಿಹ ಸತ್ವವ ತಾನೇ ಪಡೆವುದು
ಶೋಕವ ತೋರದು ಬಸವಳಿದು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಇರದು ಈ ಜೀವಕ್ಕೆ ಭವದ ಭಯ



ನಿನ್ನ ಮೊಗದಲ್ಲಿ ಕೊಂಚ ದುಃಖ
ಕಂಡರೂ ತಾಳದು ಈ ನನ್ನ ಜೀವ.
ಕಾರಣ ತಿಳಿಯದೆ ಹೆಚ್ಚುತ್ತಿದೆ ಈ ನನ್ನ
ಪುಟ್ಟ ಹೃದಯದ ಮಿಡಿಯುವ
ಜವ(ವೇಗ).
ನೀನೆ ನನ್ನ ಪಾಲಿಗೆ ಆಗಿರಲು ಮಾಧವ
ಸಹಿಸಲಾಗದು ನೋಡಲು
ದುಃಖದಲ್ಲಿರುವ ನಿನ್ನ ಮೊಗವ.
ಕಷ್ಟ ಎಷ್ಟೇ ಇದ್ದರು ಜಯಿಸಬಲ್ಲ ನನ್ನವಾ
ಸೋಲನ್ನು ಒಪ್ಪಿಕೊಳ್ಳದೆ ಗೆಲ್ಲುವ ಜಗವ.
ಜನ್ಮ ಜನ್ಮಮ್ಮಕ್ಕೂ ನೀ ಆದರೆ ನನ್ನವಾ
ಇರದು ಈ ಜೀವಕ್ಕೆ ಭವದ ಭಯ.

– ಮಂಜುಶ್ರೀ ಮುರಳೀಧರ್
ತೋರಣಗಲ್ಲು, ಬಳ್ಳಾರಿ

ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ, ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ನಮ್ಮ ಯೋಚನಾ ಲಹರಿಗೆಲ್ಲಾ ಅವನೇ ಕಾರಣ

ಬೃಹತ್ಸಾಮಾ ತಥಾ ಸಮ್ನಾಂಗ್, ಗಾಯತ್ರಿ ಛಂದ ಸಾಮಹಮ್. ಮಾಸಾನಾಂ ಮಾರ್ಗಶೀರ್ಷೋಹಮ್, ಋತುನಾಂಗ್ ಕುಸುಮಾಕರಃ"–(ಗೀತೆ, ವಿಭೂತಿಯೋಗ 35ನೇ ಶ್ಲೋಕ) ಭಗವಂತನೇ ತನ್ನ ವಿಭೂತಿಗಳನ್ನು ಅಂದರೆ, ತನ್ನ ಐಶ್ವರ್ಯ,ತಾನು ಎಲ್ಲೆಲ್ಲೆ ವ್ಯಾಪಿಸಿರುವೆ!! ಎಂದು ಹೇಳುವಾಗ, 'ಗಾಯನಕ್ಕೆ ಶ್ರೇಷ್ಠವಾದ ಶೃತಿಗಳಲ್ಲಿ ಬೃಹತ್ಸಾಮವೂ, ಛಂದಸ್ಸಿನಲ್ಲಿ :ಗಾಯತ್ರಿ ಛಂದಸ್ಸು ತಾನಾಗಿದ್ದೇನೆ' ಎಂದು ಹೇಳುತ್ತಾ, ಮಾಸಗಳಲ್ಲಿಯೇ "ಮಾರ್ಗಶೀರ್ಷ ಮಾಸ"ವು ತಾನೇ, ಮತ್ತು ಋತುಗಳಲ್ಲಿ 'ಕುಸುಮಾಕರಃ' ಅಂದರೆ, ಹಚ್ಚ ಹಸಿರನಿಂದ, ಹೂಗಳು ಅರಳಿ ನಿಂತಿರುವ ವಸಂತ ಋತುವೇ ತಾನಾಗಿದ್ದೇನೆ" ಎಂದೇ ಭಗವಂತನಾದ ಶ್ರೀ ಕೃಷ್ಣ, ಅರ್ಜುನನಿಗೆ ಮತ್ತು ಅರ್ಜುನನ ಪ್ರತಿರೂಪಿಗಳಾದ ನಮಗೆಲ್ಲಾ, ಹೆಜ್ಜೆ ಹೆಜ್ಜೆಗೂ ತನ್ನ ವ್ಯಾಪಿಯನ್ನು ತಿಳಿಸುತ್ತಾ, ತಿಳುವಳಿಕೆ ಮೂಡಿಸಿ, ಮನದಲ್ಲಿ ಮೂಡುವ ಗೊಂದಲಗಳನ್ನು ಪ್ರತಿ ಹಂತದಲ್ಲೂ ನಿವಾರಿಸುತ್ತಿದ್ದಾರೆ.

ಶ್ರೀ ಕೃಷ್ಣ ಹೇಳಿದ 'ಮಾರ್ಗಶೀರ ಮಾಸ'ವು, ಕಾರ್ತಿಕ ಮಾಸದ ನಂತರದಲ್ಲಿ, ಹೇಮಂತ ಋತುವಿನ ಆರಂಭವೇ ಮಾರ್ಗಶೀರ್ಷ ಮಾಸವಾಗಿರುವುದು. ಪ್ರಕೃತಿಯ ಬದಲಾವಣೆಯ ಕಾಲ. ದಿಢೀರನೇ ಆಗಿರುವ ಚಳಿಯ ವಾತಾವರಣ, ಅಲ್ಲಲ್ಲಿ ಮರ–ಗಿಡಗಳ ಬಣ್ಣವೂ ಬದಲಾಗಿರುವುದು, ಜೊತೆಗೆ ಇಬ್ಬನಿ ಬಿದ್ದಿರುವುದು, ಹೊಗೆ ಮಂಜು ಆವರಿಸಿರುವುದು ಪ್ರಕೃತಿಗೊಂದು ನವಭಾಷ್ಯೆಯನ್ನೇ ಬರೆದಿರುವುದು, ಕವಿ ಮನಸ್ಸುಗಳಿಗೆ ಪ್ರೇರಕವಾಗಿರುವುದು. ಈ ಸಮಯದ ಮುಂಜಾನೆಯ ಗಾಳಿ ಸೇವನೆ, ಆರೋಗ್ಯಕ್ಕೂ ಸಹ ಒಳ್ಳೆಯದು ಎಂಬುದು ಬಲ್ಲವರ ಅಭಿಪ್ರಾಯವಾಗಿದೆ.

ಮಾರ್ಗಶೀರ್ಷ ಮಾಸದಲ್ಲಿಯೇ ಬರುವ, ಶುಕ್ಲಪಕ್ಷದ ಏಕಾದಶ ದಿನ ಅಥವಾ ಏಕಾದಶಿಯಾದ "ಮೋಕ್ಷದಾ ಏಕಾದಶಿ"ಯಂದು, "ಗೀತಾ ಜಯಂತಿ"ಯಾಗಿ ಆಚರಿಸುವರು. ಮಾರ್ಗಶೀರ್ಷ ಮಾಸದಲ್ಲಿ, ಸೌರಮಾಸದ ಪ್ರಕಾರವಾಗಿ, ಧನುರ್ ರಾಶಿಯಲ್ಲಿ ಸೂರ್ಯ ಪ್ರವೇಶಿಸಿದಾಗ, ಧನುರ್ಮಾಸವು ಆರಂಭವಾಗಿರುವುದು. ಈ ಸಮಯದವು ದೇವತೆಗಳು ತಮ್ಮ ಪೂಜೆಯನ್ನು ಸಲ್ಲಿಸುವ ಕಾರಣ, ಬ್ರಾಹ್ಮಿ ಮುಹೂರ್ತದ ಪೂಜೆಗೆ ಮಹತ್ವದ ಸ್ಥಾನ. ಮಾರ್ಗಶೀರ / ಧನುರ್ಮಾಸ ಎಂದರೆ, ದಕ್ಷಿಣಾಯನ ಸಮಯದ ಅಂತಿಮ ಘಟ್ಟ ಮತ್ತು ಉತ್ತರಾಯಣ ಸಮಯದ ಆರಂಭದ ಸೂಚನೆಯ ಪರ್ವಕಾಲ, ಸಂಧಿಕಾಲವೇ ಆಗಿರುವುದು. ಆ ಸಮಯದಲ್ಲಿ ಭಗವಂತನ ಆರಾಧನೆಗೆ, ವೈಜ್ಞಾನಿಕವಾಗಿ, ಆರೋಗ್ಯಕ್ಕಾಗಿ, ಆಧ್ಯಾತ್ಮಿಕ ಸಾಧನೆಗೆ ಉತ್ತಮೋತ್ತಮ ಸಮಯ, ಎಂಬುದು ಅಭಿಪ್ರಾಯ. ಹಾಗಾಗಿಯೇ ಈ ಮಾರ್ಗಶೀರ್ಷ /ಧನುರ್ಮಾಸದಲ್ಲಿ ಮದುವೆಯಂತಹ ಸಮಾರಂಭಗಳು ನಡೆಯದೇ, ದೇವತಾ ಆರಾಧನೆಯು, ದತ್ತಾರಾಧನೆ, ಅಯ್ಯಪ್ಪ ಸ್ವಾಮಿಯ ಆಧ್ಯಾತ್ಮಿಕ ಆರಾಧನೆಗಳು, ಇನ್ನಿತರ ಆರಾಧನೆಗಳು ನಡೆದುಕೊಂಡು ಬಂದಿವೆ.

ಇಂತಹ ಪವಿತ್ರ ಮಾಸವಾದ, "ಮಾರ್ಗಶೀರ್ಷ ಮಾಸ"ವೇ ತಾನೆಂದು, ನಿಯಮಾಕ ಕೇಶವನಾದ ಶ್ರೀ ಕೃಷ್ಣ ಹೇಳಿದ್ದಾರೆ. ಪ್ರತಿಯೊಂದು ಮಾಸಕ್ಕೂ, ನಿಯಮಾಕ ದೇವತೆ ಇರುವಂತೆ, ಮಾರ್ಗಶೀರ್ಷ ಮಾಸದ ನಿಯಾಮಾಕ ದೇವರು, "ಕೇಶವ" ರೂಪಿಯಾದ ಭಗವಂತ.

ಈ ಮಾರ್ಗಶೀರ್ಷ ಮಾಸದ ಶುಕ್ಲಪಕ್ಷದ, ಏಕಾದಶಿಯಾದ, 'ಮೋಕ್ಷದಾ ಏಕಾದಶಿ'ಯನ್ನು, " ಗೀತಾ ಜಯಂತಿ"ಯಾಗಿ ಆಚರಿಸುವೆವು. ಅಂದು ಶ್ರೀ ಕೃಷ್ಣ ಪರಮಾತ್ಮನು, ತನ್ನವರೆಲ್ಲರನ್ನು ಯುದ್ಧ ಭೂಮಿಯಲ್ಲಿ ಕಂಡು, ಯುದ್ಧ ಮಾಡಲಾಗದೇ, ವಿಷಾದದಿಂದ ಇದ್ದ ಅರ್ಜುನನಿಗೆ, ತನ್ನ ಮಾತಿನ ಮೂಲಕ, 'ಗೀತೋಪದೇಶ' ಮಾಡಿದ ಪವಿತ್ರ ದಿನವಾಗಿದೆ. "ಗೀತಾ ಜಯಂತಿ"/ 'ಭಗವದ್ಗೀತಾ ಜಯಂತಿ" ಎಂದು ಕರೆಯುವರು.


ಭಗವದ್ಗೀತೆಯು, "ಮಹಾಭಾರತ" ಮಹಾಕಾವ್ಯದ, ಬೀಷ್ಮ ಪರ್ವದ ಒಂದು ಭಾಗವಾಗಿದ್ದು, ನಮ್ಮೆಲ್ಲರಿಗೂ ಪವಿತ್ರ ಗ್ರಂಥವಾಗಿದೆ.

ಗೀತೆಯ 18 ಅಧ್ಯಾಯಗಳಿಗೂ ಒಂದೊಂದು ಹೆಸರಿದ್ದು, ಅಧ್ಯಯನ ದೃಷ್ಟಿಯಿಂದ, ಆಯಾ ಅಧ್ಯಾಯವು ನಮಗೆ ತಿಳಿಸುವ ವಿಚಾರಧಾರೆಗಳ ಆಧಾರದ ಮೇಲೆ, 18 ಅಧ್ಯಾಯಗಳಲ್ಲಿ ಮೊದಲ 6 ಅಧ್ಯಾಯಗಳನ್ನು "ಕರ್ಮಯೋಗಗಳು" ಎಂದೂ, 7ರಿಂದ 12ರ ವರೆಗಿನ ಅಧ್ಯಾಯಗಳನ್ನು "ಜ್ಞಾನ ಯೋಗ" ಎಂದೂ, ಮತ್ತು 13ರಿಂದ 18ನೇ ವರೆಗಿನ ಅಧ್ಯಾಯನಗಳನ್ನು "ಭಕ್ತಿ ಯೋಗ" ಎಂದು ವಿಂಗಡನೆ ಮಾಡಲಾಗಿದೆ.

ಭಗವದ್ಗೀತೆಯು, ಕಲಿಯುವವರಿಗೆ 'ಕಾಮದೇನು ಕಲ್ಪವೃಕ್ಷ' ಎಂದೆನಿಸಿ, ಅಮೃತವನ್ನೇ ಉಣಿಸುವ "ಗೀತಾಮೃತ"ವಾಗಿದೆ.


ಮಹಾಭಾರತ, ರಾಮಾಯಣದ ಯುದ್ಧಭೂಮಿಗಳು, ಈಗಿನ ಯುದ್ಧಗಳಂತೆ ರಣರಂಗಗಳಲ್ಲ. ಆ ಯುದ್ಧಗಳು ಧರ್ಮಯುದ್ಧಗಳಾಗಿದ್ದವು. ಎರಡೂ ಸೈನ್ಯಕ್ಕೆ ಯುದ್ಧದ ನಂತರ, ಸಮಾನವಾಗಿ ಕಾಣುವಂತಹ ಸಮಾನ ಊಟಪಚಾರ, ಸಮಾನ ಚಿಕಿತ್ಸೆ ಒದಗಿಸುವ ಧರ್ಮ ಯುದ್ಧ, ಧರ್ಮ ಕ್ಷೇತ್ರಗಳಾಗಿದ್ದವು. ಜೊತೆಗೆ ಎದುರಾಳಿ ಜನ್ಮದಾರಭ್ಯ ಅಂಧನಾಗಿಯೇ ಇದ್ದ, ಧೃತರಾಷ್ಟ್ರನಿಗೂ ಸಹ, "ಆ ಸಮಯದಲ್ಲಿ ಯುದ್ಧ ವೀಕ್ಷಿಸಲು, ಕಂಗಳನ್ನು ದಯಪಾಲಿಸುತ್ತೇನೆ" ಎಂದರೂ ಸಹ, ಆ ಕಂಗಳನ್ನು ನಿರಾಕರಿಸಿದ್ದರಿಂದ, ಯುದ್ಧದ ಬಗೆಗೆ ಹೇಳಲು ಸಂಜಯನಿಗೆ ವಿಶೇಷ ಚಕ್ಷುಗಳನ್ನು ದಯಪಾಲಿಸಿದ್ದ ಶ್ರೀಕೃಷ್ಣ ಪರಮಾತ್ಮ. ಇಂತಹ ಎಲ್ಲಾ ಧರ್ಮಗಳ ಪಾಲನೆ ಇದ್ದರಿಂದಲೇ ಅದು ಯುದ್ಧಭೂಮಿಯಲ್ಲ, ಧರ್ಮಕ್ಷೇತ್ರವಾಗಿತ್ತು. ಆದ್ದರಿಂದಲೇ, ಗೀತೆಯ ಮೊದಲ ಶ್ಲೋಕವೇ, "ಧರ್ಮಕ್ಷೇತ್ರೇ ಕುರುಕ್ಷೇತ್ರೆ, ಸಮಾವೇತಾ ಯುಯುತ್ಸವಃ " ಎಂದಿರುವುದು.

ಗೀತೆಯು ಕೇವಲ, ಮನುಜನಿಗೆ ತಾನು ನಿರ್ವಹಿಸಲೇ ಬೇಕಾದ ಕರ್ಮದ ಬಗೆಗಷ್ಟೇ ಅಲ್ಲ ಹೇಳಿರುವುದು. ಜ್ಞಾನ ಎಂಬುದು ಮನುಜನಿಗೆ ಎಷ್ಟು ಅವಶ್ಯಕ & ಎಷ್ಟು ಅನಿವಾರ್ಯ? ಎಂದು ತಿಳಿಸುತ್ತಾ," ನಹಿ ಜ್ಞಾನೇನ



ಸದೃಶ್ಯಂ, ಪವಿತ್ರ ಮಿಹ ವಿದ್ಯತೆ"(ಗೀತೆ 4.38) ಎಂದು ಜ್ಞಾನದ ಮಹತ್ವವನ್ನು ಶ್ರೀ ಕೃಷ್ಣ ತಿಳಿಸಿದ್ದಾರೆ. ಈಗ ಈ ಶ್ಲೋಕವು ಪ್ರತಿ ಶಾಲೆಯ ಫಲಕದಲ್ಲೂ ಇದೆ. (ನಮ್ಮ ಪ್ರೈಮರಿ ಶಾಲೆಯಲ್ಲಿಯೂ ಇದೆ.) ಜ್ಞಾನ, ವಿದ್ಯೆ ಎಂದರೆ ವಿಶೇಷವಾದ ಜ್ಞಾನ. ಅದು ನಮ್ಮನ್ನು ನಾವು ಅರಿತುಕೊಳ್ಳಲು ಇರುವ ಅರಿವು. ಜೀವನದಲ್ಲಿ ಹೇಗಿರಬೇಕು?,ದೇಹ ಪ್ರಕೃತಿಗನುಗುಣವಾಗಿ ಯಾವ ರೀತಿಯ ಕೆಲಸಗಳನ್ನು ಮಾಡುವುದು? ಯಾವ ರೀತಿಯಲ್ಲಿ ಊಟ ಮಾಡಬೇಕು, ಸಾತ್ವಿಕ, ರಾಜಸಿ, ತಾಮಸಿ ಊಟದ ಬಗೆ ಹೇಗಿರುವುದು? ಎಂಬುದನ್ನು, ಗೀತೋಪದೇಶದ ಮೂಲಕ, ಶ್ರೀ ಕೃಷ್ಣ ನಮಗೆ ತಿಳಿಸಿಕೊಡುವನು.

ಆತ್ಮದ ಬಗೆಗೆ ಹೇಳುತ್ತಾ, ಪ್ರತಿಯೊಬ್ಬರೊಳಗೆ, ಚರಾಚರ ವಸ್ತುವಿನಲ್ಲೂ ಭಗವಂತನಿದ್ದಾನೆ. ನಮ್ಮ ಯೋಚನಾ ಲಹರಿಗೆಲ್ಲಾ ಅವನೇ ಕಾರಣ, ಎಂದು ಹೇಳುತ್ತಾ ಜನನ–ಮರಣ ಚಕ್ರದ ಆಚೆಗಿರುವ,ಮುಕ್ತವಾಗಿರುವ ಆತ್ಮದ ಬಗೆಗೆ , ಶ್ರೀ ಕೃಷ್ಣ, " ನೈನಂ ಛಿಂದಂತಿ ಶಸ್ತ್ರಾಣಿ, ನೈನಂ ದಹತಿ ಪಾವಕಃ , ನ ಚೈನಂ ಕ್ಲೇದಯಂತ್ಯಾಪೋ, ನ ಶೋಷಯತಿ ಮಾರುತಃ" ಅಂದರೆ, ಯಾವುದನ್ನು ಶಸ್ತ್ರಗಳಿಂದ ತುಂಡರಿಸಲು, ಬೆಂಕಿಯಲ್ಲಿ ಸುಡಲು,ನೀರಲ್ಲಿ ನೆನೆಸಲು, ಗಾಳಿಯಲ್ಲಿ ಒಣಗಿಸಲು ಬರುವುದಿಲ್ಲವೋ ಅದೇ ಆತ್ಮ. ಇದನ್ನು ನಾವು ವಿಜ್ಞಾನದಲ್ಲಿ ಹೇಳುವುದಾದರೆ, "ಶಕ್ತಿಯನ್ನು( ಆತ್ಮವನ್ನು) ನಾವು ಸೃಷ್ಟಿಸಲು ಸಾಧ್ಯವಿಲ್ಲ. ನಾಶ ಪಡಿಸಲೂ ಸಾಧ್ಯವಿಲ್ಲ". ಅದೇ ಇಟಿಜರಡಿಥಿ ಟಿಜುರುಜಿಡಿ ಛಿಜ ಅಡಿಜಚಿಣಜಜ, ಟಿಡಿ ಛಿಜ ಜಚಿಣಡಿಠಿಥಿಜಜ.



ಲೀಲಾವತಿ ಶಿವನಗೌಡ್ರ,
ಅಂಕಸಮುದ್ರ, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಮುಂದುವರೆದು, ನಮ್ಮೊಳಗೆ ತ್ರೈ ಗುಣಗಳು, ಆ ಗುಣಗಳ ರೂಪುರೇಷೆಗಳು, ಸೃಷ್ಟಿಯ ರಹಸ್ಯ, ಚರಾಚರದಲ್ಲೂ ಭಗವದ್ ತತ್ವ ವ್ಯಾಪಿಸಿರುವುದು. ಅದೇ ನಾವೆಲ್ಲಾ ನಂಬಿರುವ 'ಕಾಣದ ಶಕ್ತಿ'. ಅದನ್ನೇ ಶ್ರೀ ಕೃಷ್ಣನು, "ಯಚ್ಚಾಪಿ ಸರ್ವಭೂತಾನಾಂ, ಬೀಜನ್ ತದಹಮರ್ಜುನ. ,ನ ತದಸ್ತಿ ವಿನಾ ಯತ್ಸ್ಯಾತ್ ಮಯಾ ಭೂತಾನ್ ಚರಾಚರಂ" ಎಂದು, ಸರ್ವ ಜೀವಿಗಳ ಉತ್ಪತ್ತಿಗೂ ತಾನೇ ಕಾರಣ. ಏಕೆಂದರೆ ತನ್ನ ರಹಿತವಾಗಿ ಯಾವ ಜೀವಿಯೂ ಇಲ್ಲ. ಎಂದು ತಿಳಿಸಿದ ಕೃಷ್ಣ, "ಪ್ರತಿ ಚರಾಚರ ಜೀವಿಯಲ್ಲೂ ಭಗವಂತನಿದ್ದಾನೆ" ಎಂಬ ಮಾತನ್ನು ನಮಗೆ ಸೂಚ್ಯವಾಗಿ ತಿಳಿಸಿದ್ದಾರೆ. ಆದ್ದರಿಂದಲೇ ಪ್ರತಿಯೊಬ್ಬರನ್ನೂ ಗೌರವಿಸಬೇಕೆಂಬ ಮಾತಿರುವುದು.

ಭಗವಂತ ತಾನು ವ್ಯಾಪಿಸಿರುವ ಪರಮ ಅಸ್ತಿತ್ವ, ವಿಭೂತಿಯ ಬಗೆಗೆ, ವಿಶ್ವರೂಪದ ಎಂದರೇನು? 'ಅಕ್ಷರ' ಎಂದರೇನು? ಅಕ್ಷರವು ಅಂದರೆ, ಎಂದೂ ಕ್ಷರವಾಗದ, ನಾಶವಾಗದ, ಅಪೌರುಷಯವಾದ "ಓಂಕಾರ" ಪ್ರಕೃತಿಯಲ್ಲಿ ಲೀನವಾಗಿ ವ್ಯಾಪಿಸಿದಂತೆ, ನಾವು ಮಾತನಾಡುವ ಪ್ರತಿಯೊಂದು ಮಾತು, ಅಕ್ಷರವು ಪ್ರಕೃತಿಯಲ್ಲಿ ಲೀನವಾಗಿ, ಮತ್ತೇ ಮುಂದೊಂದು ದಿನ, ನಮಗೆ ಅದು ಯಾವುದೋ ಮೂಲಕ ಕೇಳಲ್ಪಡುವುದು, ಎಂಬ ರಹಸ್ಯಗಳನ್ನು, ಗೀತೆಯ ಮೂಲಕ ಶ್ರೀಕೃಷ್ಣ ನಮಗೆ, ಅರ್ಜುನೋಪಾದಿಯಲ್ಲಿ ನಮಗೆ ತಿಳಿಸುವನು. ಬ್ರಹ್ಮಾಂಡದ ಸೃಷ್ಟಿಗೆ ಕಾರಣವಾದ ಅವ್ಯಕ್ತ ಶಕ್ತಿ, ಆ ಶಕ್ತಿ ಯಾರು? ಮನದ ಗೊಂದಲಗಳನ್ನು ನಿವಾರಿಸುವ ಮಾರ್ಗಗಳು, ವಿಷಾದದಲ್ಲಿರುವಾಗ ಅದರಿಂದ ಹೇಗೆ ಹೊರ ಬರುವುದು? ಕರ್ಮಗಳೆಂದರೇನು? ಎಂಬುದನ್ನು ಶ್ರೀ ಕೃಷ್ಣನು ಗೀತಾಸಾರದ ಮೂಲಕ ನಮಗೆಲ್ಲಾ ತಿಳಿಸುವರು.

ಕೃಷ್ಣ ಹೇಳುವುದು,

"ಯದಾ ಯದಾ ಹಿ ಧರ್ಮಸ್ಯ, ಗ್ಲಾನಿರ್ಧಭವತಿ ಭಾರತ. ಅಭ್ಯತ್ಥಾನಮ ಧರ್ಮಸ್ಯ, ತದಾತ್ಮಾನಮ್ ಸೃಜಾಮ್ಯಹಮ್"(ಗೀತೆ–4–7) ಮತ್ತು "ಪರಿತ್ರಾಯಣಾಯ ಸಾಧೂನಾಂ, ವಿನಾಶಯಾ ಚ ದುಷ್ಕೃತಾಮ್, ಧರ್ಮ ಸಂಸ್ಥಾಪನಾರ್ಥ ಸಂಭವಾಮಿ ಯುಗೇ ಯುಗೇ"(ಗೀತೆ4–8)ಯಾವಾಗ ಧರ್ಮದ ಉಳಿವಿನ ಪ್ರಶ್ನೆ ಬರುವುದೋ, ಧರ್ಮಕ್ಕೆ ಸಂಕಟ ಬರುವುದೋ, ಆಗ ತಾನು ಯಾವುದೋ ರೂಪದಲ್ಲಿ ಬಂದು ಕಾಪಾಡುತ್ತೇನೆ. ಮತ್ತು ಒಳ್ಳೆಯವರಿಗೆ ಕಷ್ಟ ಬಂದಾಗ, ದುಷ್ಟರನ್ನು ಸಂಹರಿಸಲು, ಬುದ್ಧಿ ಕಲಿಸಲು ಅವತರಿಸಿಯೇ ತಾನು ಯಾವ ರೂಪದಲ್ಲಾದರೂ ಅವತರಿಸುವೆನು", ಎಂಬುದಾಗಿ ಹೇಳುವರು. ಹಾಗಾಗಿಯೇ ದಶಾವತಾರಗಳು, ದುರ್ಗಾವತಾರಗಳಾಗಿದ್ದು, ಅಲ್ಲಿ ಶಿಷ್ಟ ರಕ್ಷಣೆ, ದುಷ್ಟ ನಿಗ್ರಹಕ್ಕಾಗಿ. ಮತ್ತು ಒಳ್ಳೆಯವರಿಗೆ ಅನೇಕ ಕಷ್ಟಗಳು ಒದಗಿದಾಗ ಯಾರದೋ ಮೂಲಕವಾದರೂ ಸರಿ, ಆ ಸಮಯಕ್ಕೆ ಒದಗಿ, ಬಗೆಹರಿದಿರುವುದು ಗಮನಿಸಿರುತ್ತೇವೆ. ಅದಕ್ಕೆ ಕಾಣದ ಶಕ್ತಿ ಅನ್ನುವುದು. ಆ ಶಕ್ತಿಯೇ ಭಗವಂತ. ಅವನೇ ಶ್ರೀ ಕೃಷ್ಣ.

ಒಂದೊಂದು ಪದಕ್ಕೂ ಸಾವಿರಗಟ್ಟಲೇ ಅರ್ಥವನ್ನೇ ಸ್ಫುರಿಸುವ ಗೀತೆಯನ್ನು, ಪ್ರತಿಯೊಬ್ಬರೂ ಪ್ರತಿ ಬಾರಿಯೂ ಓದುವಾಗ, ನಮ್ಮ ಸಮಯ, ಮನಸ್ಥಿತಿಗೆ ತಕ್ಕುನಾಗಿ ವಿಭಿನ್ನ ಅರ್ಥೈಸುವಿಕೆಯೇ ಆಗಿ, ವಿಭಿನ್ನ ಅರ್ಥವೇ ನಮಗೆ ಅರಿವಾಗುವುದು. ಅದು ಗೀತೆಯನ್ನು ಓದುವಾಗ, ಗುರುಗಳ ಮೂಲಕ ಕೇಳಿಸಿಕೊಳ್ಳುವಾಗ, ಕಲಿಕೆಯಲ್ಲಿ ತೊಡಗಿದಾಗ, ಅಲ್ಲಿ ಅರ್ಜುನ ಇರದೇ, ಸ್ವತಃ ನಾವೇ ಅಲ್ಲಿದ್ದು, ಮನಸ್ಸಿನಲ್ಲಿ ಮೂಡಿರುವ ಅನೇಕ ಪ್ರಶ್ನೆಗಳಿಗೆ ಕೃಷ್ಣನ ಮೂಲಕ ಉತ್ತರ ಕಂಡುಕೊಳ್ಳುವ ಭಾವವೇ ಇರುವುದು ಸತ್ಯ. ಕೃಷ್ಣನಿಂದ ಅರ್ಜುನ, ಅರ್ಜುನನಿಂದ???? ಎಂಬ ಪ್ರಶ್ನೆ ಖಂಡಿತಾ ನಮಗೆ ಮೂಡುವುದು. ಹಾಗಾಗಿಯೇ ಇದಕ್ಕೆ ಗುರುಪರಂಪರೆ ಎಂಬ ಹೆಸರು.

4ನೇ ಅಧ್ಯಾಯದ 1ನೇ ಶ್ಲೋಕದಲ್ಲಿ ಭಗವಂತನೇ ಹೇಳಿದಂತೆ,

"ಇಮಂ ವಿವಸ್ವತೇ ಯೋಗಂ, ಪ್ರೋಕ್ತವಾನಹ ಮವ್ಯಯಮ್. ವಿವಸ್ವಾನ್ ಮನವೇ ಪ್ರಾಣ, ಮನು ರಿಕ್ಷ್ವಾಕವೇ ಬ್ರವೀತ್" ಎನ್ನುವಂತೆ, ಈ ಯೋಗವಿಜ್ಞಾನವನ್ನು ವಿವಸ್ವಾನ್ ಅಂದರೆ ಸೂರ್ಯನಿಗೆ ಮೊದಲು ನಾನು, (ಅಂದರೆ ಭಗವಂತ) ಹೇಳಿದೆ. ಸೂರ್ಯನು ತನ್ನ ಮಗನಾದ ಮನುಕುಲದ ಮೂಲ ಪುರುಷನಾದ ಮನುವಿಗೆ ಹೇಳಿದರೆ, ಮನುವು ಸೂರ್ಯವಂಶದ ಮೊದಲ ದೊರೆಯಾದ ಇಕ್ಷ್ವಾಕು ದೊರೆಗೆ ಹೇಳಿದರು, ಎಂಬುದು. 'ಅಕ್ಷರ'ರೂಪವಾಗಿದ್ದು ಭಗವಂತನ ಮೂಲಕ, ಈ ದೊರೆಗಳಿಂದ ಬೆಳೆದು, ಅದನ್ನು ಹೇಳುವ ಪರಂಪರೆಯಾಯಿತು. ಈ ರೀತಿಯಾಗಿ, ಕೃಷ್ಣ ತನ್ನ ಆತ್ಮಸಖ, ಪ್ರಿಯ ಸಖನಾಗಿದ್ದ ಧನಂಜಯನಿಗೆ, ಅನೇಕ ಜ್ಞಾನದ ಅರಿವು, ಕರ್ಮದ ಫಲ, ತನ್ನ ವ್ಯಾಪ್ತತೆಯನ್ನು ತಿಳಿಸಿ, "ಕರ್ಮಣ್ಯೇ ವಾಧಿಕಾರಸ್ತೇ, ಮಾ ಫಲೇಸು ಕದಾಚನ. ಮಾ ಫಲ ಕರ್ಮ ಹೇತುರ್ಭೂ, ಮಾತೇ ಸಂಗೋಸ್ತ್ಯ ಕರ್ಮಣಿ", ಎಂದು ತಿಳಿಸಿ, ಕರ್ಮಕ್ಕೆ ತಕ್ಕ ಫಲಗಳನ್ನು ನಾವು ಪಡೆದೇ ಪಡೆಯುವೆವು. ಅವುಗಳ ಕರ್ಮಫಲದ ಬಗೆಗೆ ಯೋಚಿಸದೇ, ಕಾರ್ಯ ನಿರ್ವಹಿಸು. ಹಾಗಂತ ಫಲಗಳಿಗೆ ಹೆದರಿ, ಕರ್ಮ ಮಾಡದಂತಿರಬಾರದು. ಇಲ್ಲಿ ಕರ್ಮ ಎಂದರೆ, ಪೂರ್ವಾರ್ಜಿತ ಕರ್ಮ ಫಲವಲ್ಲಷ್ಟೇ. ನಮ್ಮ ಸ್ವಾಭಾವದಿಂದ ನಾವು ಮಾಡುತ್ತಿರುವ, ನಡೆಸಿಕೊಂಡು ಬಂದ ವೃತ್ತಿ, ಕೆಲಸ. ಆದ್ದರಿಂದಲೇ, "ಯತ್ರ ಯೋಗೇಶ್ವರೋ ಕೃಷ್ಣ, ಯತ್ರ ಪಾರ್ಥೋ ಧನುರ್ಧರಃ. ತತ್ರ ಶ್ರೀ ವಿಜಯೋರ್ಭೂತಿ, ಧ್ರುವಾ ನೀತಿರ್ಮಮತಿರ್ಮಮ" ಎಂದು ಹೇಳಿದ್ದಾರೆ. ಕೃಷ್ಣನಂತಹ ಬಂಧು ಜೊತೆಗಿದ್ದರೆ, ಪಾರ್ಥ & ಕೃಷ್ಣ ಜೊತೆಗಿದ್ದರೆ ಸದಾ ಯಶಸ್ಸು ಇರುವುದು. ಅಲ್ಲಿ ವಿಜಯ, ಧ್ರುವ ಅಂದರೆ ಪ್ರಸಿದ್ಧತೆ, ನೀತಿ,ಮತಿ ಇರುವುದು. ಅವುಗಳ ರೂಪದಲ್ಲಿ ಭಗವದ್ರೂಪಿ ಕೃಷ್ಣ ನೆಲೆಸಿರುವನು.

ನಿಜ ಅಲ್ಲವೇ!!

ಯೋಗಕಾರಕ ಯೋಗೇಶ್ವರನಾದ ಕೃಷ್ಣನಂತಹ ಗುರು, ಸಖ, ಬಂಧು ನಮ್ಮ ಜೊತೆ ಇದ್ದರೆ, ಅರ್ಜುನನಂತಹ ಮನಸ್ಥಿತಿಯ ನಮಗೆ ಪರಿಹಾರಗಳು, ಸಮಾಧಾನ ದೊರಕುವುದು. ಯಾವುದೇ ಹಿಂಜರಿಕೆಯಿಲ್ಲದೇ ಕರ್ಮಗಳನ್ನು ಮಾಡಲು ಸಹಾಯಕವಾಗುವದು. ಇವರಿಬ್ಬರು ಇದ್ದಲ್ಲಿ ವಿಜಯ ಖಂಡಿತಾ ದೊರಕುವುದು. ಆದ್ದರಿಂದಲೇ, "ಸರ್ವ ಧರ್ಮಾನ್ ಪರಿತ್ಯಜ್ಯ, ಮಾಮೇಕಂ ಶರಣಂ ವ್ರಜ. ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷ ಹಿ ಸ್ಯಾಮಿ ಮಾ ಶುಚಃ" ಎಂದು ಹೇಳಿ, ಶರಣಾಗತ, ಧನ್ಯತಾ ಭಾವದಿಂದ ನಿನ್ನ ಕಾರ್ಯ ನೀನು ನಿರ್ವಹಿಸಿ, ನನಗೆ ಶರಣಾಗು, ಕರ್ಮಫಲಗಳ ಬಗೆಗೆ ಚಿಂತಿಸದೇ, ಕರ್ಮಗಳನ್ನು ನನಗೆ ಶರಣಾಗತ ಮಾಡು, ಸರ್ವ ಪಾಪಗಳಿಂದ ಮುಕ್ತಿ/ಮೋಕ್ಷವಾಗುವುದು, ಎಂಬುದಾಗಿದೆ.

ಗೀತೆಯನ್ನು ಮೊದಲೇ ಹೇಳಿದಂತೆ, ಪ್ರತಿ ಬಾರಿ ಓದಿದಾಗಲೂ, ಪ್ರತಿಯೊಬ್ಬರಿಗೂ ವಿಭಿನ್ನ ದೃಷ್ಟಿಯ ಅರ್ಥವು ಬಂದು, ವಿಭಿನ್ನ ಅರಿವೇ ಗೋಚರವಾಗುವುದು. ಹೇಗೆ ಬದುಕಬೇಕು, ಹೇಗಿರಬೇಕು? ಎಂದು ತಿಳಿಸುವ, ಗೀತಾಮೃತವು ಪ್ರತಿಯೊಬ್ಬರಿಗೂ, ವಿಶೇಷವಾದ ವಿಭಿನ್ನ ಅರ್ಥವನ್ನೇ ನೀಡುವುದು.

# ಐದು ಗ್ಯಾರಂಟಿ ಯೋಜನೆ ಸಮೀಕ್ಷೆ ಪರಿಶೀಲನೆ

## ವಿವಿಧ ಇಲಾಖಾ ಅನುಷ್ಠಾನಾಧಿಕಾರಿಗಳೊಂದಿಗೆ ಸಭೆ । ಇಲಾಖೆಗಳ ಅಧಿಕಾರಿಗಳಿಗೆ ಎಂ.ಎಸ್.ದಿವಾಕರ ಕಟ್ಟುನಿಟ್ಟಿನ ನಿರ್ದೇಶನ

■ ಹಂಪಿ ಟೈಮ್ಸ್ ಹೊಸಪೇಟೆ

ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಬಗ್ಗೆ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ನಡೆಸುತ್ತಿರುವ ಸಮೀಕ್ಷಾ ಪ್ರಗತಿಯು ಇದುವರೆಗೆ ವಿಜಯನಗರ ಜಿಲ್ಲೆಯಲ್ಲಿ ಶೇ.64ರಷ್ಟು ಆಗಿರುತ್ತದೆ. ಸಮೀಕ್ಷೆಗೆ ಕಾಲಾವಕಾಶವನ್ನು ಕೆಲವು ದಿನಗಳಿಗೆ ವಿಸ್ತರಿಸಲಾಗಿದೆ. ಈ ನಿಗದಿತ ಕಾಲಾವಧಿಯೊಳಗೆ ಈ ಸಮೀಕ್ಷೆಯು ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ರಾಜ್ಯಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎಂ.ರೇವಣ್ಣ ಅವರ ಅಧ್ಯಕ್ಷತೆಯಲ್ಲಿ ಮಾರ್ಚ 14ರಂದು ನಡೆದ ವಿಡಿಯೋ ಸಂವಾದದ ಬಳಿಕ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಐದು ಗ್ಯಾರಂಟಿ ಯೋಜನೆಗಳವಾರು ಆಗಿರುವ ಪ್ರಗತಿ ಪರಿಶೀಲಿಸಿ ಅವರು ಮಾತನಾಡಿದರು.



ಸರ್ಕಾರದ ಅನ್ನಭಾಗ್ಯ, ಗೃಹಲಕ್ಷ್ಮಿ, ಶಕ್ತಿ, ಗೃಹಜ್ಯೋತಿ ಮತ್ತು ಯುವನಿಧಿ ಐದು ಗ್ಯಾರಂಟಿ ಯೋಜನೆಗಳ ಜಾರಿಗೆ ಸಂಬಂಧಿಸಿದಂತೆ ನಡೆಯುತ್ತಿರುವ ಸಮೀಕ್ಷಾ ಕಾರ್ಯ ಮುಕ್ತಾಯದ ಹಂತಕ್ಕೆ ಬಂದಿದೆ. ಈ ಯೋಜನೆಗಳು ಇದುವರೆಗೆ ಎಷ್ಟು ಜನರಿಗೆ ತಲುಪಿವೆ.? ಅರ್ಹರಿದ್ದರೆ ಅಂತವರು ಯಾವ ಕಾರಣದಿಂದಾಗಿ ಈ ಯೋಜನೆಗಳ ವ್ಯಾಪ್ತಿಗೆ ಒಳಪಟ್ಟಿಲ್ಲ? ಇದಕ್ಕೆ ಏನಾದರು ತಾಂತ್ರಿಕ ಕಾರಣಗಳು ಇವೆಯಾ? ಎಂಬುದರ ಬಗ್ಗೆ ತಿಳಿಯುವುದು ಈ ಸಮೀಕ್ಷೆಯ ಉದ್ದೇಶವಾಗಿದೆ. ಅರ್ಹ ಇರುವ ಯಾರು ಸಹ ಈ ಯೋಜನೆಗಳಿಂದ ಬಿಟ್ಟು ಹೋಗಬಾರದು. ಅರ್ಹರೆಲ್ಲರೂ ಗ್ಯಾರಂಟಿ ಯೋಜನೆಗಳ ವ್ಯಾಪ್ತಿಗೆ

ಒಳಪಡಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಮನವರಿಕೆ ಮಾಡಿದರು.

ವಿವಿಧ ಐದು ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದ ವಿವಿಧ ಇಲಾಖೆಗಳ ಅನುಷ್ಠಾನಾಧಿಕಾರಿಗಳು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚಿನ ಮುತುವರ್ಜಿ ವಹಿಸಬೇಕು. ಸಂಬಂಧಿಸಿದ ವಿವಿಧ ಇಲಾಖೆಗಳ ಅಧಿಕಾರಿಗಳು ಸಮೀಕ್ಷಾ ಕಾರ್ಯದ ಮೇಲೆ ಸೂಕ್ತ ರೀತಿಯಲ್ಲಿ ಮೇಲ್ವಿಚಾರಣೆ ನಡೆಸಬೇಕು ಎಂದು ಸೂಚನೆ ನೀಡಿದರು.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಹೊಸಪೇಟೆ ವಿಭಾಗದಲ್ಲಿ ಶಕ್ತಿ ಯೋಜನೆಯಡಿ ಜೂನ್ ಮಾಹೆಯಿಂದ ಇಲ್ಲಿಯವರೆಗೆ 2 ಕೋಟಿ 54 ಲಕ್ಷ ಮಹಿಳಾ ಪ್ರಯಾಣಿಕರು ಪ್ರಯಾಣಿಸಿದ್ದಾರೆ. ಇದುವರೆಗೆ 98 ಕೋಟಿ ರೂ. ಆದಾಯ ಬಂದಿರುತ್ತದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಹೊಸಪೇಟೆ ವಿಭಾಗೀಯ ಸಂಚಾರಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ., ಆಹಾರ ಇಲಾಖೆಯ ಉಪ ನಿರ್ದೇಶಕರಾದ ಮಲ್ಲಿಕಾರ್ಜುನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶ್ವೇತಾ, ಜೆಸ್ಕಾಂನ ಅಭಿಯಂತರರಾದ ಶ್ರೀನಿವಾಸ, ಜಿಲ್ಲಾ ಉದ್ಯೋಗ ವಿನಿಮಯ ಇಲಾಖೆಯ ಅಧಿಕಾರಿ ಹಾತಪ್ಪ ಸೇರಿದಂತೆ ಇತರರು ಇದ್ದರು.

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ಪಾಲ್ಗುಣ । ಸಂವತ್ಸರ: ಶೋಭಾಕೃತ

16–03–2024 – ಶನಿವಾರ

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ರೋಹಿಣಿ |
| ಯೋಗ | : ಪ್ರಿತಿ |
| ಕರಣ | : ಗರಜ |
| ಸೂರ್ಯೋದಯ | : 06:35:45 |
| ಸೂರ್ಯಾಸ್ತ | : 18:35:21 |
| ರಾಹು | : 09:36–11:06 |
| ಯಮಘಂಡ | : 14:06–15:35 |
| ಗುಳಿಕ | : 06:36–08:06 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 15–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1583.32 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 2199 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.279 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1597.66 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8443 ಕ್ಯುಸೆಕ್ |
| ಸಾಮರ್ಥ್ಯ | 18.655 ಟಿಎಂಸಿ |

# ಭಕ್ತರ ಒಗ್ಗೂಡಿಸುವಿಕೆ ಮಠಾಧೀಶರ ಕಾರ್ಯ

## ಪೀಠಾಧೀಶ ನಿರಂಜನಪ್ರಭು ಮಹಾಸ್ವಾಮಿಗಳಿಂದ ಆಶೀರ್ವಚನ । ಮಠಗಳು ಎಲ್ಲರನ್ನೂ ಸ್ವಾಗತಿಸುತ್ತವೆ

## ಪೂರ್ವಾಶ್ರಮದ ಮಮಕಾರ ನೆನೆದು ಗದ್ಗದಿತರಾದ ಶ್ರೀಗಳು । ಭಾವದ್ವೇಗಕ್ಕೊಳಗಾಗಿ ಕಣ್ಣೀರಿಟ್ಟ ಮಾತೆಯರು

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಶೂನ್ಯ ಸಿಂಹಾಸನ ಏರಲು ಎದೆಗಾರಿಕೆಬೇಕು,ಎದೆಗಾರಿಕೆ ಇದ್ದವರು ಸ್ವಾಮಿಗಳಾಗುತ್ತಾರೆ ಎಂದು ವಳಬಳ್ಳಾರಿಯ ಸಿದ್ದಲಿಂಗಮಹಾಸ್ವಾಮಿಗಳು ಹೇಳಿದರು.

ಸಮೀಪದ ಗರಗ ನಾಗಲಾಪುರ ಶ್ರೀ ಒಪ್ಪತ್ತೇಶ್ವರ ಸ್ವಾಮಿ ವಿರಕ್ತ ಮಠದ ನಿರಂಜನಪ್ರಭುದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ನಿಮಿತ್ತ ನಡೆದಶೂನ್ಯಸಿಂಹಾಸನರೋಹಣದದಿವ್ಯಸಾನಿಧ್ಯವಹಿಸಿ ಆಶೀರ್ವಚನ ನೀಡಿದರು. ಶೂನ್ಯಸಿಂಹಾಸನ ಮೊದಲಿಗೇರಿದವರು ಹಾನಗಲ್ಲಿನ ಕುಮಾರೇಶ್ವರರು. ಅಂತಹವರು ಏರಿದ ಶೂನ್ಯಸಿಂಹಾಸನ ಏರುವುದು ಸಾಮಾನ್ಯವಲ್ಲ ಎಂದರು.

ಜಗದ್ಗುರು ಕೊಟ್ಟೂರುಬಸವಲಿಂಗ ಮಹಾಸ್ವಾಮಿಗಳು ಮಾತನಾಡಿ, ಒಪ್ಪತ್ತೇಶ್ವರ ಮಠಕ್ಕೆ ತನ್ನದೇ ಆದ ವಿಶಿಷ್ಟಪರಂಪರೆಯಿದೆ. ಈ ಪರಂಪರೆಯಿಂದಲೇ ನಾಡಿನಾದ್ಯಂತ ಹೆಸರುವಾಸಿಯಾಗಿದೆ. ಇಂತಹ ಮಠಕ್ಕೆ ಇಂದಿನಿಂದ ನಿರಂಜನಪ್ರಭು ಮಹಾಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಮೂಲ ಪರಂಪರೆಯನ್ನು





ಮುಂದುವರೆಸುವರು ಎಂದರು.

ಶಾಸಕ ನೇಮಿರಾಜನಾಯ್ಕ ಮಾತನಾಡಿ, ಧರ್ಮ, ಧಾರ್ಮಿಕತೆ ನಮ್ಮಲ್ಲಿ ಹೆಚ್ಚಾಗಬೇಕು. ಇಂದು ನಗರೀಕರಣದ ಪ್ರಭಾವದಿಂದ ನಮ್ಮ ಆಚರಣೆಗಳು ಮಂಕಾಗುತ್ತಿವೆ. ಸಂಸ್ಕಾರ, ಸಂಸ್ಕೃತಿಗಳಿಂದ ಕೂಡಿದ ಈ ದೇಶದಲ್ಲಿ ಮಹಾಮಾರಿ ಕರೋನದಿಂದ ಭೀಕರತೆ ಈ ದೇಶ ಎದುರಿಸಿಲ್ಲ ಎಂದರು. ಇದಕ್ಕೆಲ್ಲಾ ಸಾಧುಸಂತರು, ಋಷಿಮುನಿಗಳ ತಪೋಬಲದ ಪ್ರಭಾವ ಎಂದರು. ಸುಕ್ಷೇತ್ರದಲ್ಲಿರುವ ಪೂಜ್ಯರ ನೇತೃತ್ವದಲ್ಲಿ ನಾವೆಲ್ಲರೂ ದುಶ್ಚಟಗಳಿಂದ ದೂರವಿರಲು ಸಂಕಲ್ಪ ಮಾಡಲು ಕರೆನೀಡಿದರು.

ಪಟ್ಟಾಧಿಕಾರ ಸ್ವೀಕರಿಸಿದ ನಿರಂಜನಪ್ರಭು ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಒಡೆದು ಹೋದ ಸದ್ಭಕ್ತರ ಮನಸುಗಳನ್ನು ಕಟ್ಟುವ ಕೆಲಸ ಮಠಾಧೀಶರದಾಗಬೇಕು. ಮಠಾಧೀಶರು ಭಕ್ತರ ಮನಸ್ಸು ಕಟ್ಟುವ ಕಾರ್ಯಮಾಡುವಂತವರಾಬೇಕು ಎಂದರು. ಶ್ರೀಮಠಕ್ಕೆ ಬರುವಾಗ ಪ್ರತಿಯೊಬ್ಬರು ಪಾದರಕ್ಷೆ ಹೇಗೆ ಹೊರಗಡೆ ಬಿಡುವರೋ, ಹಾಗೆ ಜಾತಿ, ರಾಜಕೀಯ, ಧರ್ಮಗಳನ್ನು ಸಹ ಮಠದ ಹೊರಗಡೆ ಬಿಟ್ಟುಬರಬೇಕೆಂದು, ತಮ್ಮ ಮಠ ಸರ್ವ ಧರ್ಮದ ಮಠ ಎಂಬುದನ್ನು ಸೂಚ್ಯವಾಗಿ ತಿಳಿಸಿದರು. ನಾನು ಈ ಮಠದ ಸೇವಕ ಹೊರತು ಪೀಠಾಧಿಪತಿಯಲ್ಲ, ಎಲ್ಲಾ ಭಕ್ತರಂತೆ ನಾವು ಸೇವಕರೆ, ನಮಗೆ ಪೂರ್ವಶ್ರಮದಲ್ಲಿ ತಂದೆ–ತಾಯಿಗಳಿರುತ್ತಾರೆ. ಸ್ವಾಮಿಗಳಾದ ಮೇಲೆ ಸಮಾಜದ ಎಲ್ಲರೂ ತಂದೆ–ತಾಯಿಗಳಿದ್ದಂತೆ ಎಂದು ಪೂರ್ವಾಶ್ರಮದ ಕುರಿತು ಮಾತನಾಡುತ್ತಾ ಭಾವಪರವಶರಾದರು.

ಈ ಸಂಧರ್ಭದಲ್ಲಿ ಅರಳಿಹಳ್ಳಿಗುರುಪಾದೇವರಮಠದ ಮಲ್ಲಿಕಾರ್ಜುನಶಿವಾಚಾರ್ಯ ಮಹಾಸ್ವಾಮಿಗಳು, ಹನಸಿಯ ಶಂಕರಮಹಾಸ್ವಾಮಿಗಳು, ಹಾವೇರಿಯ ಸದಾಶಿವಮಹಾಸ್ವಾಮಿಗಳು, ಸೋಮಸಮುದ್ರದ ಸಿದ್ದಲಿಂಗದೇಶಿಕರು ಸೇರಿದಂತೆ ವಿವಿಧ ಮಠಾಧೀಶರು,ವಿವಿಧ ಕ್ಷೇತ್ರಗಳ ಗಣ್ಯರು ಉಪಸ್ಥಿತರಿದ್ದರು.

# ಕೃಷಿ ಹೊಂಡ ಘಟಕ ಅನುಷ್ಠಾನ: ಅರ್ಜಿ ಆಹ್ವಾನ

## ಬರ ಉಪಶಮನಕ್ಕಾಗಿ ಕೃಷಿ ಇಲಾಖೆಯಿಂದ ಕೃಷಿಭಾಗ್ಯ ಯೋಜನೆ

**ಹಂಪಿ ಟೈಮ್ಸ್ ಬಳ್ಳಾರಿ**

ಕೃಷಿ ಇಲಾಖೆ ವತಿಯಿಂದ ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ ಘಟಕಗಳಿಗಾಗಿ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ದಯಾನಂದ ಅವರು ತಿಳಿಸಿದ್ದಾರೆ.

ಕೃಷಿ ಭಾಗ್ಯ ಯೋಜನೆಯಡಿ ಕೃಷಿ ಹೊಂಡ ಘಟಕಗಳಿಗೆ ಒಟ್ಟು 6 ಕಡ್ಡಾಯ ಘಟಕಗಳನ್ನು (ಕೃಷಿ ಹೊಂಡ, ಕ್ಷೇತ್ರ ಬದು, ಪಾಲಿಥಿನ್ ಹೊದಿಕೆ ಕೆಂಪು ಮಣ್ಣಿಗೆ ಮಾತ್ರ, ತಂತಿಬೇಲಿ, ಡೀಸಲ್‌ಎಂಜಿನ್, ಸ್ಪ್ರಿಂಕ್ಲರ್ ಸೆಟ್) ಒಳಗೊಂಡ ಪ್ಯಾಕೇಜ್ ಇದ್ದು, ಅರ್ಹ ರೈತರು ಇದರ ಸದುಪಯೋಗ ಪಡೆದುಕೊಳ್ಳಬಹುದು.

ಮಳೆಯಾಶ್ರಿತ ಕೃಷಿ ನೀತಿ, 2014 ರನ್ವಯ 2023–24ನೇ ಸಾಲಿನಲ್ಲಿ ರಾಜ್ಯದ 5 ಒಣ ಹವಾಮಾನ ವಲಯಗಳ 24 ಬರ ಪೀಡಿತ ಜಿಲ್ಲೆಗಳಲ್ಲಿನ 106 ತಾಲ್ಲೂಕುಗಳಲ್ಲಿ ಹಾಗೂ ಗಣಿಗಾರಿಕೆಯಿಂದ ಬಾಧಿತ ಪ್ರದೇಶದಲ್ಲಿ ಸುಸ್ಥಿರ ಕೃಷಿಯನ್ನು ಉತ್ತೇಜಿಸಿ, ಬೆಲೆ ಉತ್ಪಾದಕತೆ ಮತ್ತು ರೈತರ ಜೀವನ ಮಟ್ಟವನ್ನು ಸುಧಾರಿಸುವುದರೊಂದಿಗೆ ಬರ ಉಪಶಮನದ ಗುರಿಯನ್ನು ಈ ಯೋಜನೆ ಹೊಂದಿರುತ್ತದೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸ ಲಾಗುವುದು.

# ಕನಿಷ್ಠ ಬೆಂಬಲ: ಬಿಳಿ ಜೋಳ ನೋಂದಣಿ ಮತ್ತು ಖರೀದಿ

**ಹಂಪಿ ಟೈಮ್ಸ್ ಬಳ್ಳಾರಿ**

2023–24ನೇ ಸಾಲಿನ ಮುಂಗಾರು ಋತುವಿನಲ್ಲಿ ಬೆಳೆದ ಬಿಳಿ ಜೋಳವನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರಿಂದ ನೇರವಾಗಿ ಖರೀದಿಸಲು ಬಳ್ಳಾರಿ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ತೀರ್ಮಾನಿಸಿದ್ದು, ಎಫ್.ಎ.ಕ್ಯೂ. ಗುಣಮಟ್ಟದ ಜೋಳವನ್ನು ರೈತರಿಂದ ಖರೀದಿಸಲಾಗುವುದು. ಜಿಲ್ಲೆಯಲ್ಲಿ 05 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

**ಖರೀದಿಸುವ ಉತ್ಪನ್ನ ಮತ್ತು ನಿಗದಿಯಾದ ಬೆಂಬಲ ಬೆಲೆ:**

ಬಿಳಿ ಜೋಳ. ಮಾಲ್ದಂಡಿ ಬಿಳಿ ಜೋಳಕ್ಕೆ ರೂ.3,225 (ಪ್ರತಿ ಕ್ವಿಂಟಾಲ್‌ಗೆ) ಮತ್ತು ಹೈಬ್ರಿಡ್ ಬಿಳಿ ಜೋಳಕ್ಕೆ ರೂ.3,180 (ಪ್ರತಿ ಕ್ವಿಂಟಾಲ್‌ಗೆ) ಇರುತ್ತದೆ.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು. ಇವರು ಖರೀದಿಸುವ ಏಜೆನ್ಸಿಯಾಗಿರುತ್ತಾರೆ. ಹಿಂಗಾರು ಋತುವಿನ ರೈತರ ನೊಂದಣಿ ಪ್ರಾರಂಭವು ಮಾ.11 ರಿಂದ ಮೇ.31 ವರೆಗೆ ಮತ್ತು ಹಿಂಗಾರು ಋತುವಿನ ಖರೀದಿ ಪ್ರಾರಂಭ ಮತ್ತು ಮುಕ್ತಾಯದ ದಿನವು ಏ.01 ರಿಂದ ಮೇ.31 ರ ವರೆಗೆ ಇರುತ್ತದೆ.

**ಖರೀದಿ ಕೇಂದ್ರ ಮತ್ತು ಅಧಿಕಾರಿ ಸಂಪರ್ಕ ವಿವರ:**

ಬಳ್ಳಾರಿ ತಾಲ್ಲೂಕಿನ ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಬಳ್ಳಾರಿ ಘಟಕ–1&2 ರ ನರಸಿಂಹ ಅವರ ಮೊ.9900677875, ಕಂಪ್ಲಿಯ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ರಂಗಪ್ಪ ಅವರ ಮೊ.9740838910, ಸಿರುಗುಪ್ಪದ ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಮೋಹನ ಕುಮಾರ ಅವರ ಮೊ.9731421918, ಕುರುಗೋಡಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಎ.ಪಿ.ಎಮ್.ಸಿಯ ಹುಸೇನ್ ಸಾಹೆಬ್ ಅವರ ಮೊ.8951307333, ಸಂಡೂರಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಎ.ಪಿ.ಎಮ್.ಸಿಯ ಶಿವಲಿಂಗಪ್ಪ ಅವರ ಮೊ.9945940350.

# ತಪಾಸಣೆಗೆ ನಿರ್ಲಕ್ಷ್ಯ ಬೇಡ

ಮೊದಲ ಪುಟದಿಂದ

ಸಂಕೋಚ ಪಡಬಾರದು. ಅಕ್ಕನ ಬಳಗದ ಗಮನಕ್ಕೆ ತಂದರೆ ಮತ್ತಷ್ಟು ಶಿಬಿರಗಳ ಆಯೋಜನೆ ಮೂಲಕ ಅರಿವು ಹಾಗೂ ಚಿಕಿತ್ಸೆ ದೊರಕಿಸಿಕೊಡಲು ಸಾಧ್ಯ. 80 ಕ್ಕೂ ಅಧಿಕ ಮಹಿಳೆಯರು ಶಿಬಿರ ಪ್ರಯೋಜನ ಪಡೆದಿದ್ದಾರೆ. ನಗರದ ಸ್ತ್ರೀರೋಗ ತಜ್ಞ ವೈದ್ಯರ ತಂಡ ಶಿಬಿರದಲ್ಲಿ ಸ್ವಚ್ಛೆಯಿಂದ ಪಾಲ್ಗೊಂಡು ಉಚಿತ ಸೇವೆ ಸಲ್ಲಿಸರುವುದು ಹೆಮ್ಮೆಯ ಸಂಗತಿ ಎಂದರು.

ವೈದ್ಯರಾದ ಡಾ.ಅಂಜನಾ ಗೆಜ್ಜೆ, ಡಾ.ತನುಜಾ ಹುಬ್ಳಿ, ಡಾ.ಸುಮಂಗಲಾ ಹೊಂಗಲ್, ಡಾ.ಶಶಿಕಲಾ ಗುಗ್ರಿ, ಡಾ.ಶೈಲಜಾ ಪಾಟೀಲ್ ಹಾಗೂ ಡಾ.ಪ್ರಿಯಾಂಕ ಗುಗ್ರಿ ತಪಾಸಣೆ ನಡೆಸಿದರು. ಅಕ್ಕನ ಬಳಗದ ಅಧ್ಯಕ್ಷೆ ಪ್ರಭಾ ಸಿಂದಗಿ ಸೇರಿದಂತೆ ಬಳಗದ ಸದಸ್ಯರಾದ ಗೌರಮ್ಮ ಗಂಗಾಧರಪ್ಪ, ಗಂಗಮ್ಮ ಕೆ., ಗಂಗಮ್ಮ ಕೊತ್ತಂಬ್ರಿ, ಸವಿತಾರೆಡ್ಡಿ, ಭಾರತಿ ದಿನೇಶ, ಸುಮಾ ರವಿಗೌಡ, ಲತಾ ಬಿ.ಎಲ್., ವೀಣಾ ಮಂಡಿ, ಕೃಪಾಶೀಲಾ, ಶೈಲಜಾ ಕಳಕಪ್ಪ ಸೇರಿದಂತೆ ನರ್ಸ್‌ಗಳು, ಇತರರು ಇದ್ದರು.

# ಗ್ರಾಹಕರು ಗುಣಮಟ್ಟದ ವಸ್ತು ಖರೀದಿಸಿ

## ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ; ನ್ಯಾ.ಹೇಮಲತಾ ಬಿ.ಎಚ್.ಸಲಹೆ



**ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ ಹೊಸಪೇಟೆ, ಕಂದಾಯ ಇಲಾಖೆ, ಆಹಾರ ಇಲಾಖೆ ಹೊಸಪೇಟೆ ಮತ್ತು ಕಿರಾಣಿ ವರ್ತಕರ ಸಂಘ ಹೊಸಪೇಟೆ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮವು ಮಾರ್ಚ 15ರಂದು ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆಯಿತು.

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ಹೇಮಲತಾ ಬಿ. ಹುಲ್ಲೂರ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗ್ರಾಹಕರು ವಸ್ತುಗಳ ಗುಣಮಟ್ಟ ನೋಡಿ ಖರೀದಿಸಬೇಕು. ವಸ್ತು ಖರೀದಿಸಿದಾಗ ರಶೀದಿ ಪಡೆಯಬೇಕು. ಜಾಗತಿಕ ಮಾರುಕಟ್ಟೆ ದೊಡ್ಡದಾಗುತ್ತಿದ್ದು, ಎಲ್ಲ ವ್ಯಾಪಾರಸ್ಥರು ಲಾಭಕ್ಕಾಗಿ ಪೈಪೋಟಿ ಮಾಡುತ್ತಿದ್ದು, ಲಾಭದ ಉದ್ದೇಶದಿಂದಾಗಿ ಆಹಾರ ಪದಾರ್ಥ ಮತ್ತು ಇನ್ನಿತರ ವಸ್ತುಗಳಲ್ಲಿ ಕಲಬೆರಕೆ ಮಾಡಿ ಇದರಿಂದಾಗಿ ಆರೋಗ್ಯದಲ್ಲಿ ಸಮಸ್ಯೆ ಉಂಟಾಗುತ್ತಿದೆ. ಇಂತಹ ಸಂದರ್ಭದಲ್ಲಿ ಜಿಲ್ಲಾ ಗ್ರಾಹಕ ನ್ಯಾಯಾಲಯಕ್ಕೆ ದೂರನ್ನು ಸಲ್ಲಸಬಹುದು ಎಂದು ಹೇಳಿದರು.

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಹೊಸಪೇಟೆ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿ ಕಿಶನ್ ಬಿ.ಮಾಡಲಗಿ ಅವರು ಮಾತನಾಡಿ, ಪ್ರತಿ ವರ್ಷ ಮಾರ್ಚ್ 15 ರಂದು ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆಯನ್ನು ಆಚರಿಸುತ್ತೇವೆ. ಗ್ರಾಹಕರಿಗೆ ಗ್ರಾಹಕ ಹಕ್ಕುಗಳ ಬಗ್ಗೆ ಕಾನೂನಿನ ಅರಿವು ಕಡಿಮೆ ಇದೆ. ನಾವು ತೆಗೆದುಕೊಂಡ ಸರಕಿನ ಗುಣಮಟ್ಟ ಸರಿ ಇರಬೇಕು. ಒಂದು ವಸ್ತುವನ್ನು ಅದರ ಬೆಲೆಗಿಂತ ಹೆಚ್ಚಿನ ಬೆಲೆ ಕೊಟ್ಟು ಕೊಂಡುಕೊಳ್ಳಬಾರದು. ಒಂದು ವೇಳೆ ವಸ್ತುವಿನ ಗುಣ ಮಟ್ಟ ಕಡಿಮೆ ಇದ್ದರೆ ಗ್ರಾಹಕರು ಧೈರ್ಯವಾಗಿ ಜಿಲ್ಲಾ ಗ್ರಾಹಕರ ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹೊಸಪೇಟೆಯ ಉಪ ತಹಸೀಲ್ದಾರ ಅಮರನಾಥ, ಹೊಸಪೇಟೆಯ 2ನೇ ಅಪರ ಸಿವಿಲ್ ನ್ಯಾಯಾಧೀಶರಾದ ಸಂಜೀವ್‌ಕುಮಾರ ಜಿ., 3ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಚೈತ್ರ ಜೆ., ಆಹಾರ ಇಲಾಖೆಯ ಆಹಾರ ಶಿರಸ್ತೇದಾರರಾದ ಜಿ.ಹೆಚ್.ರುದ್ರಪ್ಪ, ಆಹಾರ ನಿರೀಕ್ಷಕರಾದ ಡಿ.ಎಮ್.ನಾಗೇಂದ್ರ ನಾಯಕ್, ಪಟ್ಟಣ ಪೊಲೀಸ್ ಠಾಣೆಯ ಪೊಲೀಸ್ ಇನ್ಸಪೆಕ್ಟರ್ ಲಕನ್ ಆರ್ ಮಸಗುಪ್ಪಿ, ಕಿರಾಣಿ ವರ್ತಕರ ಸಂಘದ ಅಧ್ಯಕ್ಷರಾದ ಮುಗದ ನಾಗರಾಜ್, ವಕೀಲರ ಸಂಘದ ಅಧ್ಯಕ್ಷರಾದ ಕೆ.ಪ್ರಹ್ಲಾದ್, ಕಿರಾಣಿ ವರ್ತಕರ ಸಂಘದ ಕಾರ್ಯದರ್ಶಿ ಕೃಷ್ಣಮೂರ್ತಿ, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಶ್ರೀನಿವಾಸ ಮೂರ್ತಿ ಹಾಗೂ ಇತರರು ಇದ್ದರು.

# ವಲ್ಲಾಭಾಪುರದಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕ ಉದ್ಘಾಟನೆ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ವಲ್ಲಾಭಾಪುರದಲ್ಲಿ ಗ್ರಾ.ಪಂ.ಯ ನರೇಗಾ ಯೋಜನೆಯಡಿ 18.70ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಂಡ ಸ್ವಚ್ಛ ಸಂಕೀರ್ಣ ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ ಘಟಕವನ್ನು ಶಾಸಕ ಕೆ.ನೇಮಿರಾಜ್‌ನಾಯ್ಕ್ ಉದ್ಘಾಟಿಸಿ ಮಾತನಾಡಿದರು.

ಗ್ರಾಮಗಳಲ್ಲಿ ಸ್ವಚ್ಛತೆ ಕಾಪಾಡಬೇಕು, ಮನೆಗಳಲ್ಲಿ ನಿತ್ಯ ಉತ್ಪಾದನೆಯಾಗುವ ಹಸಿ ಕಸ ಮತ್ತು ಒಣ ಕಸಗಳನ್ನು ಬೇರ್ಪಡಿಸಬೇಕು. ಗ್ರಾ.ಪಂ.ಆಡಳಿತಗಳಿಂದ ನಿರ್ವಹಣೆಮಾಡುವ ಕಸವನ್ನು ಸಾರ್ವಜನಿಕರು ವಿಲೇವಾರಿ ಘಟಕಕ್ಕೆ ನೀಡಬೇಕು. ಇದರಿಂದ ಮನೆಗಳಲ್ಲಿ ಮತ್ತು ಮನೆಗಳ ಸುತ್ತಮುತ್ತಲಿನಲ್ಲಿ ಸ್ವಚ್ಛತೆಯಿಂದ ಕೂಡಿದ್ದು ರೋಗಮುಕ್ತವಾಗಲು ಸಾಧ್ಯವಾಗುತ್ತದೆ ಎಂದರು. ಗ್ರಾಮದಲ್ಲಿ ನಿರ್ಮಾಣಗೊಂಡಿರುವ ಕಸ ವಿಲೇವಾರಿ ಘಟಕ ಉತ್ತಮವಾಗಿ ನಿರ್ಮಾಣಗೊಂಡಿದೆ, ನಿರ್ವಹಣೆಕೂಡ ಮಾದರಿಯಾಗಲಿ ಎಂದು ಸ್ಥಳೀಯ ಜನಪ್ರತಿನಿಧಿಗಳಿಗೂ ಹಾಗೂ ಅಧಿಕಾರಿಗಳಿಗೂ ಸೂಚಿಸಿದರು.

ಇದೇ ಸಂದರ್ಭದಲ್ಲಿ ಗ್ರಾಮದಲ್ಲಿ 20ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಾಣಗೊಂಡ ಗ್ರಂಥಾಲಯ ಕಟ್ಟಡವನ್ನು ಸಹ ಉದ್ಘಾಟಿಸಿದರು.

ಈ ವೇಳೆ ಗ್ರಾ.ಪಂ.ಅಧ್ಯಕ್ಷೆ ಶಾನುಭೋಗರ ಲಕ್ಷ್ಮವ್ವ ನಾಗರಾಜ್, ಸದಸ್ಯರಾದ ಚೈತ್ರ ಮಲ್ಲಿಕಾರ್ಜುನ, ದಾಣಿ ರೇಖಾ ಸುರೇಶ, ಬಂಡಿಹಳ್ಳಿ ಹನುಮಂತಪ್ಪ, ಜೆಡಿಎಸ್ ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಸಿದ್ದರಾಜ್, ಮುಖಂಡರಾದ ಎನ್.ಎಂ.ನಾಗಭೂಷಣ ಸ್ವಾಮಿ, ಶಿವಕುಮಾರ್ ಶೆಟ್ರು, ಎ.ಮಂಜುನಾಥ, ಹ್ಯಾಟಿ ಬೆಟ್ಟಪ್ಪ, ನರಸಯ್ಯ, ಕೆ.ಎಂ.ನಾಗರಾಜ್, ಮಲ್ಲಿಕಾರ್ಜುನ, ದಾಣಿ ಸುರೇಶ್, ಎಸ್.ನಾಗರಾಜ್, ಮಾರುತೆಪ್ಪ, ಕೆ.ಬಿ.ನಾಗರಾಜ್, ಎ.ಎಂ.ಸಣ್ಣ ಕೊಟ್ರಸ್ವಾಮಿ, ಎಂ.ಭದ್ರಗೌಡ, ಬಿ.ರಾಮಚಾರಿ, ಗೂಳೆಪ್ಪ, ನಿಂಗಪ್ಪ, ಉಲವತ್ತಿ ಕೊಟ್ರಪ್ಪ, ಮಹಿಳಾ ಸಂಘದ ಅಕ್ಕಮಹಾದೇವಿ, ರೇಣುಕಮ್ಮ, ಹೇಮಾವತಿ, ಹುಲಿಗೆಮ್ಮ, ನರೇಗಾ ಸಹಾಯಕ ನಿರ್ದೇಶಕ ರಮೇಶ ಮಹಾಲಿಂಗಪುರ, ಪಿಡಬ್ಲೂಡಿ ಎಇಇ ಪುರುಷೋತ್ತಮ, ಪಿಡಿಒ ಆರ್.ಡಿ.ನವೀನ್ ಕುಮಾರ್, ಇಂಜಿನಿಯರ್ ಶಿವಕುಮಾರ್, ಶಾಸಕರ ಆಪ್ತ ಸಹಾಯಕ ದೊಡ್ಡಬಸಪ್ಪ ರಡ್ಡಿ, ಬಿ.ಎಫ್.ಟಿ. ನಾಗರಾಜ್ ಹಾಗೂ ಗ್ರಾ.ಪಂ.ಸಿಬ್ಬಂದಿವರ್ಗ ಸೇರಿದಂತೆ ಮುಂತಾದವರಿದ್ದರು.


# ಮಾ.16ಕ್ಕೆ ವಿದ್ಯುತ್ ಗ್ರಾಮೀಣ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಜೆಸ್ಕಾಂನ ಹೊಸಪೇಟೆ ಗ್ರಾಮೀಣ ಉಪವಿಭಾಗದ ಕಚೇರಿಯಲ್ಲಿ ಗ್ರಾಹಕರ ಸಂವಾದ ಸಭೆಯನ್ನು ಮಾರ್ಚ 16ರ ಬೆಳಿಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ.

ಹೊಸಪೇಟೆ ತಾಲ್ಲೂಕಿನ ವಿದ್ಯುತ್ ಗ್ರಾಹಕರು (ಹೊಸಪೇಟೆ ನಗರ ಹೊರತುಪಡಿಸಿ) ಸಭೆಯಲ್ಲಿ ಭಾಗವಹಿಸಿ ವಿದ್ಯುತ್ ಸಮಸ್ಯೆ ಇದ್ದರೆ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬೇಕು ಎಂದು ಗ್ರಾಮೀಣ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

# ಎರಡು ಬಸ್‌ಗಳ ಸಂಚಾರಕ್ಕೆ ಚಾಲನೆ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಟ್ಟಣದ ಡಿಪೋದಿಂದ ಕೆಕೆಆರ್‌ಟಿಸಿ ನೂತನ ಎರಡು ಬಸ್ ಸಂಚಾರ ಆರಂಭವಾದವು. ಬಸ್‌ಗಳಿಗೆ ಶಾಸಕ ಕೆ.ನೇಮಿರಾಜ್‌ನಾಯ್ಕ್ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ತಾಲೂಕಿನ ಸಾರ್ವಜನಿಕರಿಗೆ ಅನುಕೂಲವಾಗಲೆಂದು ಅಮೋಘವರ್ಷ ಎರಡು ಬಸ್‌ಗಳ ಘಟಕಕ್ಕೆ ತರಿಸಲಾಗಿದೆ. ಪಟ್ಟಣದಿಂದ ಬೆಂಗಳೂರಿಗೆ, ಬೆಂಗಳೂರಿನಿಂದ ಪಟ್ಟಣಕ್ಕೆ ನಿತ್ಯ 9.30ಕ್ಕೆ ಹೊರಡುವ ಬಸ್‌ಗಳಾಗಿವೆ ಎಂದರು.

ಈ ವೇಳೆ ನಂದಿಪುರದ ಡಾ.ಮಹೇಶ್ವರ ಸ್ವಾಮೀಜಿ, ಪುರಸಭೆ ಸದಸ್ಯರಾದ ಬಿ.ಡಿ. ಗಂಗಾಧರ, ಜನ್ನು ನಾಗರಾಜ್ ದೀಪಕ್ ಕಠಾರೆ, ಜೆಡಿಎಸ್ ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಜಿಲ್ಲಾ ಉಪಾಧ್ಯಕ್ಷ ಕೃಷ್ಣಮೂರ್ತಿ ಶೆಟ್ರು, ಮುಖಂಡರಾಧ ಬನ್ನಿಗೋಳ ವೆಂಕಣ್ಣ, ಎಚ್. ಎಂ.ವಿಜಯಕುಮಾರ್, ರೋಹಿತ್, ಪಾಂಡುರಂಗನಾಯ್ಕ್, ಚಿತ್ತವಾಡ್ಗಿ ಪ್ರಕಾಶ್, ಸಿದ್ದರಾಜ್, ಸರ್ದಾರ್ ಯಮನೂರಪ್ಪ, ರಡ್ಡಿ ಕೊಟ್ರೇಶ, ಗಂಗಾಧರಯ್ಯ, ಬಡಿಗೇರ್ ಬಸವರಾಜ್, ಸಂಚಿ ಶಿವಕುಮಾರ್, ಐನಳ್ಳಿ ಸೋಮಶೇಖರ್, ಚಿಲಗೋಡು ಈಶಪ್ಪ, ನಿವೃತ್ತ ಸೇನಾನಿ ಎಂ.ರಾಮರಡ್ಡಿ, ಅಡೂರ್ ಶಿವಕುಮಾರ್ ಮತ್ತಿತರರು ಇದ್ದರು.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA